॥ ಶ್ರೀ ಕೃಷ್ಣಾಯ ನಮಃ ॥

# ಮಾದನೂರು ವಿಷ್ಣುತೀರ್ಥ ವಿರಚಿತ ಷೋಡಶೀ

## ಕನ್ನಡದ ಸಾರಸಂಗ್ರಹ: ಮ॥ಸಂ॥ವಿ॥ ಕರ್ನೂಲು ಶ್ರೀನಿವಾಸಾಚಾರ್ಯ

ಪ್ರಾತಃಸ್ಮರಣೀಯರಾದ ವಿಷ್ಣುತೀರ್ಥರು ಶ್ರುತಿಸ್ಮೃತಿಗಳಲ್ಲಿ ಬಂದಿರುವ ಅನೇಕ ಶಾಸ್ತ್ರಪ್ರಮೇಯಗಳನ್ನು ನಮ್ಮ ಜೀವನದಲ್ಲಿ ಸುಲಭವಾಗಿ ಅಳವಡಿಸಿಕೊಳ್ಳಬಹುದಾದ ಸರಳನುಡಿಗಳಲ್ಲಿ ಸಂಸ್ಕೃತದಲ್ಲಿ ಹದಿನಾರು ಪ್ರಕರಣದಲ್ಲಿ ಸಂಗ್ರಹಿಸಿಟ್ಟಿದ್ದಾರೆ, ಗುರುಗಳಾದ ಶ್ರೀ ಕರ್ನೂಲು ಶ್ರೀನಿವಾಸಾಚಾರ್ಯರು ನಮ್ಮ ಮೇಲಿನ ಅನುಗ್ರಹದಿಂದ ಅದನ್ನು ಸರಳ ಕನ್ನಡ ನುಡಿಗಳಲ್ಲಿ ಆಯಾ ಪ್ರಕರಣಗಳ ಸಾರವನ್ನು ಹೇಳಿದ್ದಾರೆ. ಇದನ್ನು ನಾವು ಅನುಸಂಧಾನಪೂರ್ವಕವಾಗಿ ಓದಿ ಕಾರ್ಯ ಸಾರ್ಥಕ ಹಾಗೂ ನಾವು ನಮ್ಮ ಗುರುಗಳಿಗೆ ಕೊಡಬಹುದಾದ ಗುರುದಕ್ಷಿಣೆ.

## ಷೋಡಶೀ ಚಿಂತನೆ

### 01 ಬಂಧಕ ಪ್ರಕರಣ

ನನ್ನ ಒಳಗೂ ಹೊರಗೂ ಸಕಲಜೀವ ರಾಶಿಗಳಲ್ಲೂ ಸೂಕ್ಷ್ಮವಾಗಿ ಜೀವರಿಗೆ ಅಶ್ರಯವಾಗಿರುವ ಬಿಂಬರೂಪಿ ಹರಿಗೆ ನಮೋನಮಃ

ಬಿಂಬರೂಪಿಯ ದರ್ಶನಕ್ಕೆ ಪ್ರತಿಬಂಧಕಗಳನ್ನು ನಿವಾರಣೆ ಮಾಡುವ ಅನಂತ ನಾರಾಯಣಾದಿ ರೂಪಗಳಿಗೆ ನಮೋನಮಃ

ನನ್ನ ಸ್ವರೂಪದೇಹದ ಜೊತೆಗೆ ಹಾಲು ನೀರು ಬೆರೆತಂತೆ ಬೆರೆತಿರುವ, ಲಿಂಗದೇಹದ ಆಕಾರದಲ್ಲಿರುವ, ಹದಿನಾರು ಕಲೆಗಳಿಗೆ ಆಧಾರವಾಗಿರುವ, ಆಯಾ ಹೆಸರಿನಿಂದಿರುವ (ಪಂಚಜ್ಞಾನೇಂದ್ರಿಯ, ಪಂಚ ಕರ್ಮೇಂದ್ರಿಯ, ಪಂಚಭೂತ ಹಾಗೂ ಮನಸ್ಸು) ಭಗವದ್ರೂಪಗಳಿಗೆ ನಮೋನಮಃ

ನೀನು ದಯಯಿಟ್ಟು ತಿರೋಮುಖನಾದರೆ ನನ್ನ ಅಜ್ಞಾನವನ್ನೇ ಬೀಜವಾಗಿಟ್ಟುಕೊಂಡು ಅಭಿಮಾನಗಳನ್ನು ಹುಟ್ಟಿಸಿದ ಆ ಮೂಲ ಅಜ್ಞಾನದಲ್ಲಿರುವ ಭಗವದ್ರೂಪಕ್ಕೆ ನಮೋನಮಃ

01. ನನ್ನಲ್ಲಿರುವ ಕತೃತ್ವದ ವಿಷಯದ ಅಜ್ಞಾನದಿಂದ ಹುಟ್ಟಿರುವ, ನಾನೇ ಕರ್ತಾ ಎಂಬ, ಸ್ವತಂತ್ರ ಕತೃತ್ವಾಭಿಮನದಲ್ಲಿರುವ ಭಗವದ್ರೂಪಕ್ಕೆ ನಮೋನಮಃ. ದಯವಿಟ್ಟು ತಿರೋಮುಖನಾಗಿ ಈ ಅಭಿಮಾನವನ್ನು ತೆಗೆದುಬಿಡು.

02.ನನ್ನಲ್ಲಿರುವ ಭೋಕ್ತೃತ್ವ ವಿಷಯದ ಅಜ್ಞಾನದಂದ ಹುಟ್ಟಿದ, ನಾನೇ ಭೋಕ್ತನೆಂಬ , ಸ್ವತಂತ್ರವಾಗಿ ಫಲವನ್ನು ಭೋಗಿಸುವ ಅಭಿಮಾನದಲ್ಲಿರುವ ಭಗವದ್ರೂಪಕ್ಕೆ ನಮೋನಮಃ. ದಯವಿಟ್ಟು ತಿರೋಮುಖನಾಗಿ ಈ ಅಭಿಮಾನವನ್ನು ತೆಗೆದುಬಿಡು.

03. ನನ್ನಲ್ಲಿರುವ ಇಂದ್ರಿಯಗಳ ವಿಷಯದ ಅಜ್ಞಾನದಿಂದ, ನಾನೇ ಇಂದ್ರಿಯಗಳಿಗೆ ಯಜಮಾನನೆಂಬ ಅಭಿಮಾನದಲ್ಲಿರುವ ಭಗವದ್ರೂಪಕ್ಕೆ ನಮೋನಮಃ. ದಯವಿಟ್ಟು ನೀನು ತಿರೋಮುಖನಾಗಿ ನನ್ನಲ್ಲಿ ಪ್ರಕಟಮಾಡಿದ ಈ ಅಭಿಮಾನವನ್ನು ದೂರಗೊಳಿಸು.

04. ನನ್ನಲ್ಲಿರುವ ಫಲ ಪ್ರಾಪ್ತಿ ಕುರಿತಾದ ಅಜ್ಞಾನದಿಂದ, ಫಲವೂ ನನ್ನದೇ ಎಂಬ ಫಲದ ಮೇಲಿನ ಯಜಮಾನನೆಂಬ, ಅಭಿಮಾನದಲ್ಲಿರುವ ಭಗವದ್ರೂಪಕ್ಕೆ ನಮೋನಮಃ. ದಯಯಿಟ್ಟು ತಿರೋಮುಖನಾಗಿ ನನ್ನಲ್ಲಿರುವ ಈ ಅಭಿಮಾನವನ್ನು ದೂರಗೊಳಿಸು.

05 ಶ್ರೀಹರಿಭಕ್ತಿ, ಶ್ರೀಹರಿಪ್ರಸಾದಗಳೇ ಪುರುಷಾರ್ಥವೆಂಬ ಜ್ಞಾನವಿಲ್ಲದ್ದರಿಂದ ದುಃಖಕ್ಕೆ ಸಮಾನವಾದ ಪ್ರಾಕೃತ ಸುಖವೇ ಪುರುಷಾರ್ಥವೆಂಬ ಅಭಿಮಾನದಲ್ಲಿರುವ ಭಗವದ್ರೂಪಕ್ಕೆ ನಮೋನಮಃ. ದಯಯಿಟ್ಟು ನೀನು ತಿರೋಮುಖನಾಗಿ ಈ ಅಭಿಮಾನವನ್ನು ದೂರಗೊಳಿಸು.

06. ಪ್ರಾಕೃತ ಸುಖಸಾಧನವೇ ಪುರುಷಾರ್ಥವಾಧನವೆಂಬ ಅಭಿಮಾನದಲ್ಲಿರುವ ಭಗವದ್ರೂಪಕ್ಕೆ ನಮೋನಮಃ. ದಯವಿಟ್ಟು ತಿರೋಮುಖನಾಗಿ ಈ ಅಭಿಮಾನ ದೂರಗೊಳಿಸು.

07. ಪ್ರಾಕೃತ ದುಃಖದಮೇಲೆ, ಪುರುಷಾರ್ಥ ಅಲ್ಲ ಅಥವಾ ಹಿತಕಾರಿ ಅಲ್ಲವೆಂಬ ದ್ವೇಷ, ಹಾಗೆ ದುಃಖ ಸಾಧನದಲ್ಲಿ ಹಿತಕಾರಿ ಅಲ್ಲ ವೆಂಬ ದ್ವೇಷ. ಈ ಎರೆಡರಲ್ಲೂ ಇರುವ ಭಗವದ್ರೂಪಕ್ಕೆ ನಮೋನಮಃ. ನೀನು ತಿರೋಮುಖನಾಗಿ ಈ ದ್ವೇಷಗಳನ್ನು ದೂರಗೊಳಿಸು. ತತ್ವಾಭಿಮಾನಿಗಳ ಮೂಲಕ, ನಿನ್ನ ರೂಪಗಳನ್ನಿಟ್ಟು, ನೀನೇ ನನ್ನಿಂದ

ಅಭಿಮಾನ ರಾಗ ದ್ವೇಷಾದಿಗಳ ಮೂಲಕ, ಜ್ಞಾನ ಸಂಪಾದನೆ ಮಾಡುವುದು, ಅದಕ್ಕೆ ತಕ್ಕ ಕರ್ಮಾನುಷ್ಠಾನ ಮಾಡುವುದು, ನನ್ನಿಂದ ಮಾಡಿಸಿ ಈ ಮೂಲಕ ನನ್ನನ್ನು ಕಟ್ಟಿ ಹಾಕುತ್ತಾ ಇದ್ದೀಯಾ, ದಯವಿಟ್ಟು ಈ ಬಂಧನಗಳನ್ನು ತೊಲಗಿಸು. ತತ್ವಾಭಿಮಾನಿ ದೇವತೆಗಳ ಅಂತರ್ಯಾಮಿಯಾದ ಮುಖ್ಯಪ್ರಾಣಪತಿ ಬಿಂಬರೂಪಿ ಶ್ರೀಹರಿಯೇ ನೀನೇ ಗತಿ.

॥ಶ್ರೀಕೃಷ್ಣಾರ್ಪಣಮಸ್ತು॥

## 02. ಬಂಧಕನಿವೃತ್ತಿ ಪ್ರಕರಣ

01. ಶ್ರೀಹರಿಯೇ ಮುಖ್ಯ ಕರ್ತೃವಾಗಿದ್ದಾನೆ. ಆತನನ್ನು ಅನುಸರಿಸಿ ಬ್ರಹ್ಮಾದಿ ಪುಷ್ಕರಾಂತ ತತ್ವ ದೇವತೆಗಳು ನನ್ನಲ್ಲಿ ಕರ್ತೃಗಳಾಗಿದ್ದಾರೆ. ನಾನು ಅಸ್ವತಂತ್ರನಾದ ಪರಧೀನ ಕರ್ತೃ ಎಂಬ ಈ ಪ್ರಧಾನ ಜ್ಞಾನದಲ್ಲಿ ಪ್ರಕಟವಾಗುವ ಭಗವದ್ರೂಪಕ್ಕೆ ನಮೋನಮಃ. ನೀನು ದಯವಿಟ್ಟು ಈ ಜ್ಞಾನವನ್ನು ಕೊಟ್ಟು ನಾನೇ ಸ್ವತಂತ್ರಕರ್ತೃವೆಂಬ ಅಜ್ಞಾನದ ಮೂಲಕ ಬಂದ ಅಭಿಮಾನವನ್ನು ನಿವಾರಿಸು.

02. ಶ್ರೀಹರಿಯೇ ಪ್ರಧಾನವಾಗಿ ಎಲ್ಲಾ ಕರ್ಮಫಲದಲ್ಲಿರುವ ತನ್ನ ರೂಪಗಳನ್ನು ಭೋಜನ ಮಾಡುವವ, ಬ್ರಹ್ಮಾದಿ ಸಕಲ ದೇವತೆಗಳು ಅವನಿಂದಾಗಿ ಕರ್ಮಫಲಗಳನ್ನು ಉಣ್ಣುತ್ತಾರೆ. ನಾನು ಇವರ ಅನುಗ್ರಹದಿಂದ ನನ್ನ ಕರ್ಮಫಲವನ್ನು ಭೋಜನ ಮಾಡುತ್ತೇನೆ. ಸ್ವತಂತ್ರ ಭೋಕ್ತೃವಲ್ಲ ಎಂಬ ಈ ಜ್ಞಾನದಲ್ಲಿರುವ ಭಗವದ್ರೂಪಕ್ಕೆ ನಮೋನಮಃ. ಹೇ ಸ್ವಾಮಿ! ನೀನು ಈ ಜ್ಞಾನವನ್ನು ನನಗೆ ಕೊಡುವ ಈ ರೂಪವನ್ನು ಪ್ರಕಟಮಾಡು, ಈ ಜ್ಞಾನವನ್ನು ಕೊಟ್ಟು ನಾನೇ ಸ್ವತಂತ್ರನಾಗಿ ಫಲವನ್ನು ಉಣಬಲ್ಲೆನೆಂಬ, ಅಭಿಮಾನವನ್ನು ದೂರಗೊಳಿಸು, ನಿನಗೆ ನಮೋನಮಃ.

03 ಇಂದ್ರಿಯಗಳಿಗೆ ಮುಖ್ಯ ಸ್ವಾಮಿಯು ಶ್ರೀಹರಿಯೇ, ಆತನಪ್ಪಣೆಯಿಂದ ಬ್ರಹ್ಮಾದಿದೇವತೆಗಳು ನನ್ನ ಇಂದ್ರಿಯಗಳಿಗೆ ನಿಯಾಮಕರು, ನಾನು ಅವರ ಅನುಗ್ರಹದಿಂದ ಇಂದ್ರಿಯಗಳವ್ಯಾಪಾರ ಪಡೆಯುವವ ಎಂಬ, ಈ ಜ್ಞಾನವನ್ನು ಪ್ರಟಮಾಡುವ ನಿನ್ನ ರೂಪವನ್ನು ಪ್ರಕಟಗೊಳಿಸು ನನ್ನೊಳಗಿರುವ ಇಂದ್ರಿಯಗಳ

ಮೇಲಿನ ಅಭಿಮಾನಗಳನ್ನು ಬೇಗ ದೂರಗೊಳಿಸು. ನಿನ್ನ ಈ ರೂಪಕ್ಕೆ ನಮಸ್ಕಾರಗಳು.

04. ಫಲಕ್ಕೂ ಬ್ರಹ್ಮಾದಿಗಳ ಮೂಲಕ ನೀನೇ ಮುಖ್ಯಸ್ವಾಮಿಯಾಗಿ ನನಗೆ ಫಲವನ್ನು ಕೊಡುತ್ತಿದ್ದೀಯಾ ಎಂಬ ಈ ಸುಜ್ಞಾನದೊಳಗಿರುವ ನಿನ್ನ ರೂಪಕ್ಕೆ ನಮೋನಮಃ. ಈ ಜ್ಞಾನವನ್ನು ಪ್ರಕಟಗೊಳಿಸುವ ನಿನ್ನ ರೂಪವನ್ನು ಪ್ರಕಟಗೊಳಿಸಿ ನನ್ನ ಫಲದ ಸ್ವಾತಂತ್ರ ಅಭಿಮಾನವನ್ನು ದೂರಗೊಳಿಸು ನಿನಗೆ ಅನಂತ ನಮಸ್ಕಾರಗಳು.

05 ಶ್ರೀಹರಿ ಭಕ್ತಿ ಪ್ರಸಾದಗಳೇ ಪರಮ ಪುರುಷಾರ್ಥ ಎಂಬ ಜ್ಞಾನ, ಅದರ ಸಾಧನಗಳೇ ಪುಶ್ರಾರ್ಥ ಸಾಧನೆಗಳು, ಎಂಬ ಜ್ಞಾನ ನನಗೆ ಪ್ರಕಟಮಾಡುವ ನಿನ್ನ ರೂಪವನ್ನು ಸಮ್ಮುಖಮಾಡಿ ನನಗೆ ಪ್ರಕೃತ ಸುಖವೇ, ಅದರ ಸಾಧನಗಳೇ ಪುರುಷಾರ್ಥ ಸಾಧನಗಳು ಎಂಬ ರಾಗವನ್ನು ಬಿಡಿಸು. ನೀನಲ್ಲದೆ ಮತ್ಯಾರೂ ಗತಿಯಿಲ್ಲ, ಈ ನಿನ್ನ ರೂಪಕ್ಕೆ ನಮಸ್ಕಾರಗಳು.

06ಪ್ರಾಕೃತ ದುಃಖ ಪುರುಷಾರ್ಥವಲ್ಲ ಅದರ ಸಾಧನಗಳೂ ಪುರುಷಾರ್ಥ ಸಾಧನವಲ್ಲ ಎಂಬ ದುಃಖದ ಮೇಲಿನ ದ್ವೇಷವನ್ನು ದೂರ ಮಾದುವ ನಿನ್ನ ರೂಪವನ್ನು ಪ್ರಕಟಗೊಳಿಸಿ ಈ ದ್ವೇಷವನ್ನು ನಿವಾರಣಮಾಡುವ ನಿನ್ನ ರೂಪಕ್ಕೆ ಅನಂತ ನಮಸ್ಕಾರಗಳು.

ಈ ರೀತಿಯಾಗಿ ನಿನ್ನ ಕರ್ತೃತ್ವ ಮೊದಲಾದ ಮೇಲಿನ ಅನುಸಂಧಾನಗಳನ್ನು ಕೊಟ್ಟು, ನಾನು ಸದಾ ನಿನ್ನ ಅಧೀನನೆಂಬ ತಿಳುವಳಿಕೆ ಅನುಭವದಲ್ಲಿ ಕಾರ್ಯ ನಡೆಯುವಾಗ ನೀನೇ ಕೊಟ್ಟು ಸದಾ ನಮ್ಮನ್ನು ರಕ್ಷಿಸು, ಬಂಧಕನೂ ನೀನೇ ಮೋಚಕನೂ ನೀನೇ ಎಂಬ ಈ ಪ್ರಧಾನ ಮಂತ್ರ ನನ್ನ ಮನದಲ್ಲಿ ಸತತ ಜಪಿಸುವಂತಾಗಲಿ. ತತ್ವಾಭಿಮಾನಿಗಳು ಎನ್ನೊಳಗೆ ಇದೇ ಜ್ಞಾನವನ್ನು ಸದಾ ಪಾಲಿಸುವಂತೆ ದಯಮಾಡು ಹರಿಯೇ.

॥ಶ್ರೀ ಕೃಷ್ಣಾರ್ಪಣಮಸ್ತು॥

## 03. ಬಿಂಬ ಪ್ರತಿಬಿಂಬ ಭಾವ ಪ್ರಕರಣ

ಮನಸ್ಸು ಶ್ರೀಹರಿಯ ಪಾದಕಮಲಗಳಲ್ಲೇ ಸದಾ ಆದರದಿಂದ ಇರುವುದೇ ಪರಮ ಮುಖ್ಯ ಸಾಧನ. ಈ ರೀತಿಯ ದೇವರ ನೆನಪು ಬರಲಿಕ್ಕೇನೇ ಸ್ನಾನ ಸಂಧ್ಯಾದಿ ಇತರ ಸಾಧನಗಳು. ಈ ಸಾಧನಗಳನ್ನೆಲ್ಲಾ ಹೃದಯ ಗುಹೆಯಲ್ಲಿ ವಾಸ ಮಾಡಿಕೊಂಡಿರುವ ಶ್ರೀಹರಿಯೇ ಮಾಡಿಮಾಡಿಸುತ್ತಾನೆ.

01. ಬೆಳಿಗ್ಗೆ ಎದ್ದಾಗಿನಿಂದ ರಾತ್ರಿ ಮಲಗುವವರೆಗೂ ನನ್ನಿಂದ ನಡೆಯುವ ಸಕಲ ಮನೋ,ವಾಕ್, ಕಾಯ ಸಾಧನಗಳು ಏನಾಗುತ್ತವೆ ಆಯಾ ಸಾಧನಗಳಲ್ಲಿ ಆಯಾ ಸಾಧನಗಳ ಹೆಸರುಗಳಿಂದ ನಿಂತಿರುವ ತತ್ವಾಭಿಮಾನಿ ದೇವತಾಂತರ್ಗತ ಭಾರತೀರಮಣ ಮುಖ್ಯಪ್ರಾಣಾಂತರ್ಗತ ನನ್ನ ಬಿಂಬ ಮೂರ್ತಿಗೆ ಅನಂತ ನಮಸ್ಕಾರಗಳು. ಸ್ಥೂಲ ಶರೀರದೊಳಗೆ ಪ್ರಕಶತಃ(ಪ್ರಕಾಶದಿಂದ) ವ್ಯಾಪ್ತನಾದ ನನ್ನೊಳಗೆ ಮುಖದಲ್ಲಿ ಮುಖ, ಕೈಯಲ್ಲಿ ಕೈ, ಕಲ್ಲಲ್ಲಿ ಕಾಲು ಈ ಕ್ರಮದಿಂದ ಸರ್ವತ್ರ ವ್ಯಾಪ್ತನಾಗೆ ನಿಂತಿರುವ ಪುಷ್ಕರನಿಗೆ, ಅವರೊಳಗಿರುವ ತತ್ವಾಭಿಮಾನಿ ದೇವತಾಂತರ್ಗತ ಮುಖ್ಯಪ್ರಾಣಾಂತರ್ಗತ ಪುಷ್ಕರ ಬಿಂಬಾಭಿನ್ನ ನನ್ನ ಬಿಂಬಕ್ಕೆ ನಮೋನಮಃ.

ಪ್ರಾರ್ಥನೆ: ನನ್ನ ಸಕಲ ಕರ್ಮಗಳನ್ನು ಭಗವತ್ಪೂಜೆ ಎಂಬ ಅನುಸಂಧಾನದಿಂದ ಮಾಡುವಹಾಗೆ ನೀವು ನನಗೆ ದೇವರ ನೆನಪನ್ನು ಕೊಟ್ಟು ದಯೆಯಿಟ್ಟು ಮಾಡಿಸಿ.ನನಗೆ ನೀವೇ ಗತಿ, ನೀವಲ್ಲದೆ ಬೇರೆ ಗತಿ ಇಲ್ಲ.

02. ಪುಷ್ಕರನೊಲಗೆ ನಿಂತ ಶನೈಶ್ಚರಾಂತರ್ಗತ ತತ್ವಾಭಿಮಾನಿ ದೇವತಾಂತರ್ಗತ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಶನೈಶ್ಚರ ನಾಮಕ ಶನೈಶ್ಚರ ಬಿಂಬಾಭಿನ್ನ ನನ್ನ ಬಿಂಬ ಮೂರ್ತಿಗೆ ನಮೋನಮಃ.

ಪ್ರಾರ್ಥನೆ: ನನ್ನ ಸಕಲ ಕರ್ಮಗಳನ್ನು ಭಗವತ್ಪೂಜೆ ಎಂಬ ಅನುಸಂಧಾನದಿಂದ ಮಾಡುವ ಹಾಗೆ ನೀವು ನನ್ನಗೆ ದೇವರ ನೆನಪನ್ನು ಕೊಟ್ಟು ದಯೆಯಿಟ್ಟು ಮಾಡಿಸಿ, ನನಗೆ ನೀವೇ ಗತಿ, ನೀವಲ್ಲದೆ ಬೇರೆ ಗತಿಯಿಲ್ಲ.

03. ಶನೈಶ್ಚರನೊಳಗಿರುವ ಉಷಾದೇವಿ ಅಂತರ್ಗತ ತತ್ವಾಭಿಮಾನಿ ದೇವತಾಂತರ್ಗತ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಉಷಾನಾಮಕ (ಎಂಬ ಹೆಸರಿನಿಂದಿರುವ) ಉಷಾ ಬಿಂಬಾಭಿನ್ನ ಮದ್ಬಿಂಬ ಮೂರ್ತಿಗೆ ನಮೋನಮಃ.

ಪ್ರಾರ್ಥನೆ:

04. ಉಷಾದೇವಿಯೊಳಗಿರುವ ಬುಧ ಅಂತರ್ಗತ ತತ್ವಾಭಿಮಾನಿಗಳಂತರ್ಗತ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಬುಧನಾಮಕ ಬುಧ ಬಿಂಬಾಭಿನ್ನ ನನ್ನ ಬಿಂಬ ಮೂರ್ತಿಗೆ ನಮೋನಮಃ.

ಪ್ರಾರ್ಥನೆ:

05. ಬುಧನೊಳಗೆ ನಿಂತಿರುವ ಸ್ವಾಹಾದೇವಿ ಅಂತರ್ಗತ ತತ್ವಾಭಿಮಾನಿಗಳಂತರ್ಗಾ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಸ್ವಾಹಾನಾಮಕ ಸ್ವಾಹಾದೇವಿಯ ಬಿಂಬಾಭಿನ್ನ ಮದ್ಬಿಂಬಮೂರ್ತಿಗೆ ನಮೋನಮಃ.

ಪ್ರಾರ್ಥನೆ:

06.ಸ್ವಾಹಾದೇವಿಯೊಳಗೆ ನಿಂತಿರುವ ಪರ್ಜನ್ಯನಾಮಕ ದೇವನ ಒಳಗಿರುವ ತತ್ವಾಭಿಮಾನಿಗಳಂತರ್ಗತ ಭಾ.ಮು. ಪರ್ಜನ್ಯನಾಮಕ ಬಿಂಬಾಭಿನ್ನ ನನ್ನ ಬಿಂಬಮೂರ್ತಿಗೆ ನಮೋನಮಃ.

ಪ್ರಾರ್ಥನೆ:

07.ಪರ್ಜನ್ಯಾಂತರ್ಗತ ವಿಘ್ನೇಶ,ಅಶ್ವಿನಿ ದೇವತೆಗಳು ಕುಬೇರರು ಅವರಂತರ್ಗತ ತತ್ವೇಶ ದೇವತಂತರ್ಗತ ಭಾ.ಮು. ವಿಘ್ನೇಶನಾಮಕ ,ಅಶ್ವಿನಿನಾಮಕ ,ಕುಬೇರನಾಮಕ ಅವರವರ ಬಿಂಬಮೂರ್ತಿಗಳ ಅಭಿನ್ನನಾದ ನನ್ನ ಬಿಂಬಮೂರ್ತಿಗೆ ನಮೋನಮಃ.

ಪ್ರಾರ್ಥನೆ:

08.ವಿಘ್ನೇಶ,ಕುಬೇರ,ಅಶ್ವಿನಿ ಅವರೊಳಗಿರುವ ಮಿತ್ರ, ನಿಋುತಿ ಅವರಂತರ್ಗತ ತತ್ವಾಭಿಮಾನಿಗಳಂತರ್ಗತ ಭ.ಮು. ಮಿತ್ರನಾಮಕ,ನಿಋುತಿ ನಾಮಕ ಅವರವರ ಬಿಂಬಾಭಿನ್ನ ನನ್ನ ಬಿಂಬ ಮೂರ್ತಿಗೆ ನಮೋನಮಃ

ಪ್ರಾರ್ಥನೆ:

09. ಮಿತ್ರ,ನಿಋುತಿ ಅವರಂತರ್ಗತ ಅಗ್ನಿ ಅಂತರ್ಗತ ತತ್ವೇಶ ದೇವತಾಂತರ್ಗತ ಭಾ.ಮು. ಅಗ್ನಿನಾಮಕ ಅಗ್ನಿದೇವರ ಬಿಂಬಾಭಿನ್ನ ನನ್ನ ಬಿಂಬ ಮೂರ್ತಿಗೆ ನಮೋನಮಃ

ಪ್ರರ್ಥನೆ:

10. ಅಗ್ನಿಯೊಳಗೆ ನಿಂತಿರುವ ವರುಣದೇವರ ಅಂತರ್ಗತ ತತ್ವಾಭಿಮನಿ ದೇವತಾಂತರ್ಗತ ಭಾ.ಮು. ವರುಣನಾಮಕ ವರುಣದೇವರ ಬಿಂಬಾಭಿನ್ನ ಮದ್ಬಿಂಬ ಮೂರ್ತಿಗೆ ನಮೋನಮಃ.

ಪ್ರಾರ್ಥನೆ:

11. ವರುಣಾದೇವರವೊಳಗಿರುವ ಚಂದ್ರ,ಸೂರ್ಯ,ಯಮಧರ್ಮ,ಶತರೂಪಾದೇವಿಯರು ಅವರೊಳಗಿರುವ ತತ್ವಾಭಿಮಾನಿ ದೇವತಾಂತರ್ಗತ ಭಾ.ಮು. ಚಂದ್ರನಾಮಕ, ಸೂರ್ಯನಾಮಕ, ಯಮಧರ್ಮನಾಮಕ, ಶತರೂಪಾನಾಮಕ ಅವರವರ ಬಿಂಬಾಭಿನ್ನ ನನ್ನ ಬಿಂಬಮೂರ್ತಿಗೆ ನಮೋನಮಃ.

ಪ್ರಾರ್ಥನೆ:

12. ಚಂದ್ರ,ಸೂರ್ಯ,ಯಮಧರ್ಮ,ಶತರೂಪಾದೇವಿಯರೊಳಗೆ ನಿಂತಿರುವ ಪ್ರವಹನಾಮಕ ದೇವತಾಂತರ್ಗತ ತತ್ವೇಶ ದೇವತಾಂತರ್ಗತ ಭಾ.ಮು. ಪ್ರವಹನಾಮಕ ಪ್ರವಹದೇವರ ಬಿಂಬಾಭಿನ್ನ ನನ್ನ ಬಿಂಬಮೂರ್ತಿಗೆ ನಮೋನಮಃ.

ಪ್ರಾರ್ಥನೆ:

13. ಪ್ರವಹನಾಮಕ ದೇವರೊಳಗಿರುವ ಸ್ವಾಯಂಭುವಮನು,ಬೃಹಸ್ಪತಿ,ದಕ್ಷ,ರತಿ,ಶಚಿ,ಅನಿರುದ್ಧ ಅವರವರ ಒಳಗಿರುವ ತತ್ವಾಭಿಮಾನಿ ದೇವತಾಂತರ್ಗತ ಭಾ.ಮು.ಅನಿರುದ್ಧನಾಮಕ,ಸ್ವಾಯಂಭೂನಾಮಕ,ಬೃಹಸ್ಪತಿನಾಮಕ.ದಕ್ಷನಾಮಕ,ರತಿನಾಮಕ,ಶಚಿನಾಮಕ ಅವರವರ ಬಿಂಬಾಭಿನ್ನ ನನ್ನ ಬಿಂಬಕ್ಕೆ ನಮೋನಮಃ.

ಪ್ರಾರ್ಥನೆ:

14.ಸ್ವಾಯಂಭೂಮನು,ಬೃಹಸ್ಪತಿ,ದಕ್ಷ,ರತಿ,ಶಚಿ,ಅನಿರುದ್ಧರೊಳಗಿರುವ ಅಹಂಕಾರಿಕ ಪ್ರಾಣಾಂತರ್ಗತ ತತ್ವಾಭಿಮಾನಿದೇವತಾಂತರ್ಗತ ಭಾ.ಮು. ಅಹಂಕಾರಿಕ ಪ್ರಾಣನಾಮಕ ಅಹಂಕಾರಿಕ ಪ್ರಾಣಾಭಿನ್ನ ನನ್ನ ಬಿಂಬಮೂರ್ತಿಗೆ ನಮೋನಮಃ.

ಪ್ರಾರ್ಥನೆ:

15. ಅಹಂಕಾರಿಕ ಪ್ರಾಣದೇವರೊಳಗಿರುವ ಇಂದ್ರ,ಕಾಮಾಂತರ್ಗತ ತತ್ವಾಭಿಮಾನಿದೇವತಾಂತರ್ಗತ ಭಾ.ಮು. ಇಂದ್ರ,ಕಾಮನಾಮಕ ಇಂದ್ರ,ಕಾಮಾಭಿನ್ನ ನನ್ನ ಬಿಂಬಮೂರ್ತಿಗೆ ನಮೋನಮಃ.

ಪ್ರಾರ್ಥನೆ:

16. ಇಂದ್ರ,ಕಾಮರೊಳಗಿರುವ ಸೌಪರ್ಣಿ,ವಾರುಣಿ,ಗಿರಿಜಾಂತರ್ಗತ ತತ್ವಾಭಿಮಾನಿ ದೇವತಾಂತರ್ಗತ ಭಾ.ಮು. ಸೌಪರ್ಣಿನಾಮಕ, ವಾರುಣಿನಾಮಕ,ಗಿರುಜಾನಾಮಕ ಸೌಪರ್ಣಿ,ವಾರುಣಿ,ಗಿರಿಜಾ ಬಿಂಬಾಭಿನ್ನ ನನ್ನ ಬಿಂಬಮೂರ್ತಿಗೆ ನಮೋನಮಃ.

ಪ್ರಾರ್ಥನೆ:

17. ಸೌಪರ್ಣಿ,ವಾರುಣಿ,ಗಿರಿಜರೊಳಗಿರುವ ಗರುಡ,ಶೇಷ,ರುದ್ರಾಂತರ್ಗತ ತತ್ವಾಭಿಮಾನಿ ದೇವತಾಂತರ್ಗತ ಬ್ರಹ್ಮ,ವಾಯು,ಸರಸ್ವತಿ,ಭಾರತಿಯರಂತರ್ಗತ ಗರುಡ,ಶೇಷ,ರುದ್ರನಾಮಕ ಅವರವರ ಬಿಂಬಾಭಿನ್ನ ನನ್ನ ಬಿಂಬಮೂರ್ತಿಗೆ ನಮೋನಮಃ

ಪ್ರಾರ್ಥನೆ:

18.ಗರುಡ,ಶೇಷ,ರುದ್ರರೊಳಗಿರುವ ಸರಸ್ವತಿ,ಭಾರತಿ ಅಂತರ್ಗತ ತತ್ವಾಭಿಮಾನಿ ದೇವತಾಂತರ್ಗತ ಬ್ರಹ್ಮ,ವಾಯುಗಳಂತರ್ಗತ ಸರಸ್ವತಿ,ಭಾರತಿನಾಮಕ ಅವರವರ ಬಿಂಬಾಭಿನ್ನ ನನ್ನ ಬಿಂಬ ಮೂರ್ತಿಗೆ ನಮೋನಮಃ.

ಪ್ರಾರ್ಥನೆ:

19. ಸರಸ್ವತಿ,ಭಾರತಿಯರೊಳಗಿರುವ ಬ್ರಹ್ಮ ,ವಾಯುಗಳಂತರ್ಗತ ಮಹಾಲಕ್ಷ್ಮೀದೇವಿ ಅಂತರ್ಗತ ಬ್ರಹ್ಮ ವಾಯು ಎಂದು ಹೆಸರಿಟ್ಟುಕೊಂಡ ಅವರವರ ಬಿಂಬಾಭಿನ್ನ ನನ್ನ ಬಿಂಬಮೂರ್ತಿಗೆ ನಮೋನಮಃ.

ಪ್ರಾರ್ಥನೆ:

20.ಬ್ರಹ್ಮ,ವಾಯುಗಳೊಳಗೆ ನಿಂತಿರುವ ಮಹಾಲಕ್ಶ್ಮೀಯೊಳಗೆ ನಿಂತಿರುವ ಲಕ್ಷ್ಮೀದೇವಿ ಎಂಬ ಹೆಸರಿನಿಂದಿರುವ ನನ್ನ ಬಿಂಬಾಭಿನ್ನ ಸಕಲರೊಡೆಯ ಮದ್ಬಿಂಬಮೂರ್ತಿಗೆ ನಮೋ ನಮಃ.

ಪ್ರಾರ್ಥನೆ:

21 ಮಹಾಲಕ್ಷ್ಮೀ ಮೊದಲುಗೊಂಡು ಪುಷ್ಕರನ ಪರ್ಯಂತ ಭಗವಂತ ಈ ರೀತಿಯಾಗಿ ದ್ರವ್ಯಬಿಂಬ ಪ್ರತಿಬಿಂಬ ಭಾವದಿಂದ ತೋರುತ್ತಿದ್ದಾನೆ. ಅಂತಹ ನನ್ನ ಬಿಂಬಮೂರ್ತಿಗೆ ನಮೋನಮಃ.

॥ಶ್ರೀ ಕೃಷ್ಣಾರ್ಪಣಮಸ್ತು॥

## 04.ಬಿಂಬ ಸಂಸ್ಥಾಪನ ಪ್ರಕರಣ

ನಮ್ಮ ಹೃದಯಾಕಾಶದಲ್ಲಿ ಹಾಗೂ ಶರೀರದ ಸುತ್ತಲು ಕಣಕಣದಲ್ಲೂ ಅನಂತರೂಪಗಳಿಂದ ವ್ಯಾಪಿಸಿರುವ ಬಿಂಬಮೂರ್ತಿಗೆ ನಮೋನಮಃ

ನವನಾರೀಕುಂಜರದಂತೆ ಅನೇಕ ರೂಪಾತ್ಮಕ ಅವಯವಗಳಿಂದ ಕೂಡಿದ ನಿನ್ನ ಪ್ರತಿಯೊಂದು ರೂಪಕ್ಕೂ ಅನಂತ ನಮಸ್ಕಾರಗಳು.

01.ಅನೇಕ ನಾರಾಯಣ ರೂಪಗಳಿಂದ ಕೂಡಿದ ಬಿಂಬಮೂರ್ತಿಯ ಶಿರಸ್ಸಿಗೆ ನಮೋನಮಃ

02. ಅನೇಕ ಪ್ರದ್ಯುಮ್ನ ರೂಪಗಳಿಂದ ಕೂಡಿದ ಅನೇಕ ಕೇಶವ ರೂಪಗಳಿಂದ ಹೊಳೆಯುತ್ತಿರುವ ಬಿಂಬ ಮೂರ್ತಿಗೆ ನಮೋನಮಃ

03.ಅನೇಕ ನಾರಾಯಣ ರೂಪಗಳಿಂದ ಕೂಡಿದ ಬಿಂಬ ಮೂರ್ತಿಯ ಹುಬ್ಬುಗಳಿಗೆ, ಹುಬ್ಬುಗಳ ಮಧ್ಯ ಪ್ರದೇಶಕ್ಕೆ ನಮೋನಮಃ

04.ಅನೇಕ ಪ್ರದ್ಯುಮ್ನ ರೂಪಗಳಿಂದ ಹೊಂದಿರುವ ಬಿಂಬನ ಬಲಗಣ್ಣಿನ ಇಂದ್ರಿಯಕ್ಕೆ ನಮೋನಮಃ

05.ಅನೇಕ ಅನಿರುದ್ಧರೂಪಗಳಿಂದ ಹೊಂದಿರುವ ಬಿಂಬನ ಎಡಗಣ್ಣಿನ ಇಂದ್ರಿಯಕ್ಕೆ ನಮೋನಮಃ

06.ಅನೇಕ ಕಪಿಲರೂಪಗಳಿಂದ ತಯಾರಾದ ಬಿಂಬಮೂರ್ತಿಯ ಎರಡು ಕಣ್ಣಿನ ಗೋಳಕಗಳಿಗೆ ನಮೋನಮಃ

07.ಅನೇಕ ರಾಮರೂಪಗಳಿಂದ ತಯಾರಾದ ಬಿಂಬನ ಎರಡು ಕಣ್ಣಿನಲ್ಲಿರುವ ಬಿಳೀ ಭಾಗಕ್ಕೆ ನಮೋನಮಃ

08.ಅನೇಕ ಕೃಷ್ಣರೂಪಗಳಿಂದ ಏರ್ಪಟ್ಟ ಬಿಂಬನ ಎರಡು ಕಣ್ಣುಗಳ ಕಪ್ಪುಭಾಗಕ್ಕೆ ನಮೋನಮಃ

09.ಅನೇಕ ಸೂಕ್ಷ್ಮ ಕಪಿಲರೂಪಗಳಿಂದ ತಯಾರಾದ ಬಿಂಬನ ಎರಡು ಕಣ್ಣುಗಳಲ್ಲಿರುವ ಕನೀನಿಕ ಎಂದು ಕರೆಸಿಕೊಂಡ ಚುಕ್ಕೆಪ್ರಾಂತಕ್ಕೆ ನಮೋನಮಃ

10.ಅನೇಕ ವಾಸುದೇವರೂಪಗಳಿಂದ ತೋರುವ ಬಿಂಬನ ಶ್ರೋತ್ರೇಂದ್ರಿಯಕ್ಕೆ ನಮೋನಮಃ

11.ಅನೇಕ ಅನಿರುದ್ಧರೂಪಗಳಿಂದ ತೋರುವ ಬಿಂಬನ ಎರಡು ಶ್ರೋತ್ರೇಂದ್ರಿಯ ಗೋಲಕಕ್ಕೆ ನಮೋನಮಃ

12.ಅನೇಕ ಸಂಕರ್ಷಣರೂಪಗಳಿಂದ ತೋರುವ ಬಿಂಬನ ಎರಡು ಕಪೋಲಗಳಿಗೆ ನಮೋನಮಃ

13.ಅನೇಕ ಪ್ರದ್ಯುಮ್ನರೂಪಗಳಿಂದ ತೋರುವ ಬಿಂಬನ ಘ್ರಾಣೇಂದ್ರಿಯಕ್ಕೆ ನಮೋನಮಃ

14.ಅನೇಕ ನೃಸಿಂಹರೂಪಗಳಿಂದ ಶೋಭಿಸುವ ಬಿಂಬನ ಘ್ರಾಣೇಂದ್ರಿಯದ ಗೋಲಕವಾದ ಮೂಗಿಗೆ ನಮೋನಮಃ

15.ಅನೇಕ ವಾಸುದೇವರೂಪಗಳಿಂದ ಶೋಭಿಸುವ ಬಿಂಬನ ಮೇಲ್ತುಟಿಗೆ ನಮೋನಮಃ

16.ಅನೇಕ ಸಂಕರ್ಷಣರೂಪಗಳಿಂದ ಶೋಭಿಸುವ ಬಿಂಬನ ಕೆಳತುಟಿಗೆ ನಮೋನಮಃ

17.ಅನೇಕ ಪ್ರದ್ಯುಮ್ನ ರೂಪಗಳಿಂದ ತಯಾರಾದ ಮೇಲಿನ ಹಾಗೂ ಕೆಳಗಿನ ಎರಡು ದಂತ ಪಂಕ್ತಿಗಳಿಗೆ ನಮೋನಮಃ

18.ಅನೇಕ ಸಂಕರ್ಷಣರೂಪಗಳಿಂದಲೇನೇ ಶೋಭಿಸುವ ಬಿಂಬನ ರಸನೇಂದ್ರಿಯದ ಗೋಲಕವಾದ ಜಿಹ್ವಾಮೂಲಕ್ಕೆ ನಮೋನಮಃ

19.ಅನೇಕ ಸಂಕರ್ಷಣರೂಪಗಳಿಂದ ಶೋಭಿಸುವ ಬಿಂಬನ ರಸನೇಂದ್ರಿಯಕ್ಕೆ ನಮೋನಮಃ

20. ಅನೇಕ ವಾಸುದೇವ ರೂಪಗಳಿಂದ ಏರ್ಪಟ್ಟ ಬಿಂಬನ ವಾಗಿಂದ್ರಿಯಕ್ಕೆ ನಮೋನಮಃ

21.ಅನೇಕ ಪರಶುರಾಮರೂಪಗಳಿಂದ ಶೋಭಿಸುವ ಬಿಂಬನ ವಾಗಿಂದ್ರಿಯದ ಗೋಲಕವಾದ ಮುಖಕ್ಕೆ ನಮೋನಮಃ

22.ಅನೇಕ ವಾಸುದೇವನಿಂದ ಉದ್ಭೂತವಾದ ಗೋವಿಂದ ರೂಪಗಳಿಂದ ಶಂಖದಂತೆ ಹೊಳೆಯುವ ಬಿಂಬನ ಕಂಠಪ್ರದೇಶಕ್ಕೆ ನಮೋನಮಃ

23.ಅನೇಕ ವರಾಹರೂಪಗಳಿಂದ ತುಂಬಿರುವ ತ್ರಿವಿಕ್ರಮರೂಪಗಳಿಂದ ಶೋಭಿಸುವ ಬಿಂಬನ ಬಲಹೆಗಲಿಗೆ ನಮೋನಮಃ

24.ಅನೇಕ ನಾರಾಯಣರೂಪಗಳಿಂದ ತುಂಬಿರುವ ಹೃಷಿಕೇಶರೂಪಗಳಿಂದ ಕೂಡಿದ ಬಿಂಬನ ಎಡಹೆಗಲಿಗೆ ನಮೋನಮಃ

25.ಅನೇಕ ದಾಮೋದರರೂಪಗಳಿಂದ ಕೂಡಿದ ಬಿಂಬನ ಕಕುತ್ತಿಗೆ(ಬೆನ್ನು ಕುತ್ತಿಗೆ ಸೇರುವ ಪ್ರಾಂತಕ್ಕೆ ಕಕುತ್ತು ಎಂದು ಹೆಸರು) ನಮೋನಮಃ

26.ಅನೇಕ ನಾರಾಯಣರೂಪಗಳಿಂದ ಕೂಡಿದ ಪದ್ಮನಾಭರೂಪಗಳಿಂದ ಏರ್ಪಟ್ಟ ಬಿಂಬನ ಬೆನ್ನಿಗೆ ನಮೋನಮಃ

27.ಅನೇಕ ವಾಸುದೇವರೂಪಗಳಿಂದ ತಯಾರಾದ ಬಿಂಬನ ಬಲಮೇಲುಕೈಯ ಹಸ್ತೆಂದ್ರಿಯಕ್ಕೆ ನಮೋನಮಃ

28.ಅನೇಕ ಸಂಕರ್ಷಣರೂಪಗಳಿಂದ ತಯಾರಾದ ಬಿಂಬನ ಎಡಮೇಲುಕೈಯ ಹಸ್ತೇಂದ್ರಿಯಕ್ಕೆ ನಮೋನಮಃ

29.ಅನೇಕ ಪ್ರದ್ಯುಮ್ನರೂಪಗಳಿಂದ ತಯಾರಾದ ಬಿಂಬನ ಎಡಕೆಳ ಹಸ್ತೇಂದ್ರಿಯಕ್ಕೆ ನಮೋನಮಃ

30.ಅನೇಕ ಅನಿರುದ್ಧ ರೂಪಗಳಿಂದ ತೋರುವ ಬಿಂಬನ ಬಲಕೆಳ ಹಸ್ತೇಂದ್ರಿಯಕ್ಕೆ ನಮೋನಮಃ

31.ಅನೇಕ ವಾಸುದೇವರೂಪಗಳಿಂದ ತೋರುವ ಬಿಂಬನ ಬಲ ಊರ್ಧ್ವಹಸ್ತೇಂದ್ರಿಯದ ಗೋಳಕಕ್ಕೆ ನಮೋನಮಃ

32.ಅನೇಕ ಸಂಕರ್ಷಣರೂಪಗಳಿಂದ ತಯರಾದ ಬಿಂಬನ ಎಡ ಮೇಲು ಹಸ್ತೆಂದ್ರಿಯದ ಗೋಳಕಕ್ಕೆ ನಮೋನಮಃ (ಹಸ್ತಕ್ಕೆ)

33.ಅನೇಕ ಪ್ರದ್ಯುಮ್ನರೂಪಗಳಿಂದ ತಯಾರಾದ ಬಿಂಬನ ಎಡ ಕೆಳ ಹಸ್ತಕ್ಕೆ ನಮೋನಮಃ

34.ಅನೇಕ ಅನಿರುದ್ಧರೂಪಗಳಿಂದ ತಯಾರಾದ ಬಿಂಬನ ಬಲ ಕೆಳ ಹಸ್ತಕ್ಕೆ ನಮೋನಮಃ

35.ಅನೇಕ ವಾಸುದೇವರೂಪಗಳಿಂದ ಶೋಭಿಸುವ ಬಿಂಬನ ನಾಲ್ಕುಹಸ್ತಗಳಲ್ಲಿ ಶೋಭಿಸುವ ಧ್ವಜವೆಂಬ (ಲಾಂಛನ) ಚಿನ್ಹೆಗೆ ನಮೋನಮಃ

36.ಅನೇಕ ಸಂಕರ್ಷಣರೂಪಗಳಿಂದ ತೋರುವ ಬಿಂಬನ ನಾಲ್ಕು ಕೈಗಳಲ್ಲಿರುವ ವಜ್ರ ಲಾಂಛನಕ್ಕೆ ನಮೋನಮಃ

37.ಅನೇಕ ಪ್ರದ್ಯುಮ್ನ ರೂಪಗಳಿಂದ ಏರ್ಪಟ್ಟ ಬಿಂಬನ ನಾಲ್ಕು ಹಸ್ತಗಳಲ್ಲಿರುವ ಬಿಂಬನ ಅಂಕುಶ ಚಿನ್ಹೆಗೆ ನಮೋನಮಃ

38.ಅನೇಕ ಅನಿರುದ್ಧರೂಪಗಳಿಂದ ಏರ್ಪಟ್ಟ ಬಿಂಬನ ನಾಲ್ಕು ಹಸ್ತಗಳಲ್ಲಿ ಶೋಭಿಸುವ ಪದ್ಮ ಚಿನ್ಹೆಗೆ ನಮೋನಮಃ

39.ಅನೇಕ ನಾರಾಯಣರೂಪಗಳಿಂದ ಕೂಡಿರುವ ನಾಲ್ಕು ಹಸ್ತಗಳ ಹೆಬ್ಬೆರಳುಗಳಿಗೆ ಮತ್ತು ನಖಗಳಿಗೆ ನಮೋನಮಃ

40.ಅನೇಕ ವಾಸುದೇವರೂಪಗಳಿಂದ ಏರ್ಪಟ್ಟ ಬಿಂಬನ ನಾಲ್ಕು ಹಸ್ತಗಳಲ್ಲಿರುವ ತೋರುಬೆರಳುಗಳಿಗೆ ಮತ್ತು ನಖಗಳಿಗೆ ನಮೋನಮಃ

41.ಅನೇಕ ಸಂಕರ್ಷಣರೂಪಗಳಿಂದ ಕೂಡಿರುವ ಬಿಂಬನ ನಾಲ್ಕು ಹಸ್ತಗಳಲ್ಲಿರುವ ಮಧ್ಯಬೆರಳುಗಳಿಗೆ ಮತ್ತು ನಖಗಳಿಗೆ ನಮೋನಮಃ

42.ಅನೇಕ ಪ್ರದ್ಯುಮ್ನ ರೂಪಗಳಿಂದ ಶೋಭಿಸುವ ಬಿಂಬನ ನಾಲ್ಕು ಹಸ್ತಗಳ ಅನಾಮಿಕ ಬೆರಳುಗಳಿಗೆ ಹಾಗೂ ನಖಗಳಿಗೂ ನಮೋನಮಃ

43.ಅನೇಕ ಅನಿರುದ್ಧ ರೂಪಗಳಿಂದ ಹೊಳೆಯುವ ಬಿಂಬನ ನಾಲ್ಕು ಹಸ್ತಗಳಲ್ಲಿರುವ ಕನಿಷ್ಠಿಕಾ ಎಂಬ ಕಿರುಬೆರಳು ಮತ್ತು ನಖಗಳಿಗೆ ನಮೋನಮಃ

44.ಅನೇಕ ಪ್ರಾಜ್ಞರೂಪಗಳಿಂದ ತೋರುವ ಬಿಂಬನ ಬಲಮೇಲುಗೈಯಲ್ಲಿರುವ ಚಕ್ರಕ್ಕೆ ನಮೋನಮಃ

45.ಅನೇಕ ವಿಶ್ವಾದಿ ಸಹಸ್ರಮೂರ್ತಿಗಳಿಂದ ಏರ್ಪಟ್ಟ ಚಕ್ರದ ಸಾವಿರ ಅರಗಳಿಗೂ ನಮೋನಮಃ

46.ಅನೇಕ ತುರಿಯರೂಪಗಳಿಂದ ತಯಾರಾದ ಬಿಂಬನ ಎಡಮೇಲುಗೈಯಲ್ಲಿರುವ ಗದೆಗೆ ನಮೋನಮಃ

47.ಅನೇಕ ವಿಶ್ವಾದಿ ಎಂಟು ಮೂರ್ತಿಗಳಿಂದ ಏರ್ಪಟ್ಟ ಬಿಂಬನ ಗದೆಯ ಸುತ್ತಿರುವ ಗದೆಯ ಎಂಟು ಅರಗಳಿಗೆ ನಮೋನಮಃ

48.ಅನೇಕ ತೈಜಸ ರುಪಗಳಿಂದ ಏರ್ಪಟ್ಟ ಬಿಂಬನ ಎಡಕೆಳಕೈಯ್ಯಲ್ಲಿರುವ ಪದ್ಮಕ್ಕೆ ನಮೋನಮಃ

49.ಅನೇಕ ವಿಶ್ವಾದಿ ಸಾವಿರ ರೂಪಗಳಿಂದ ಎರ್ಪಟ್ಟ ಆ ಪದ್ಮದ ಸಾವಿರದಳಗಳಿಗೆ ನಮೋನಮಃ

50.ಅನೇಕ ವಿಶ್ವರೂಪಗಳಿಂದ ಏರ್ಪಟ್ಟ ಬಿಂಬನ ಬಲಕೆಳಕೈಯ್ಯಲ್ಲಿರುವ ಶಂಖಕ್ಕೆ ನಮೋನಮಃ

51.ನಾರಾಯಣಾದಿ ನೂರು ರೂಪಗಳಿಂದ ಏರ್ಪಟ್ಟ ಶಂಖದಲ್ಲಿರುವ ನೂರು ಆವರ್ತಗಳಿಗೆ ನಮೋನಮಃ

52.ಅನೇಕ ಪ್ರದ್ಯುಮ್ನ ರೂಪಗಳಿಂದ ತಯಾರಾದ ಅನೇಕ ಮಾಧವರೂಪಗಳಿಂದ ಏರ್ಪಟ್ಟ ನಮ್ಮ ಹೃದಯಕ್ಕೆ ಆಧಾರವಾದ ಬಿಂಬನ ಹೃದಯಕ್ಕೆ ನಮೊನಮಃ

53.ಅನೇಕ ಅನಿರುದ್ಧರೂಪಗಳಿಂದ ಎರ್ಪಟ್ಟ ಬಿಂಬನ ವಕ್ಷಸ್ಥಳಕ್ಕೆ ನಮೋನಮಃ

54.ಅನೇಕ ನೃಸಿಂಹರೂಪಗಳಿಂದ ಶೋಭಿಸುವ ಬಿಂಬಮೂರ್ತಿಯ ಎರಡು ಸ್ಥನಗಳಿಗೂ ನಮೋನಮಃ

55.ಅನೇಕ ವಾಸುದೇವರೂಪಗಳಿಂದ ತುಂಬಿದ ವಿಷ್ಣುಮೂರ್ತಿಗಳಿಂದ ಶೋಭಿಸುವ ಬಲ ಮೇಲು ಹೊಟ್ಟೆಗೆ ನಮೋನಮಃ

56.ಅನೇಕ ವರಾಹರೂಪಗಳಿಂದ ತುಂಬಿದ ವಾಮನರೂಪಗಳಿಂದ ಏರ್ಪಟ್ಟ ಬಿಂಬನ ಎಡ ಮೇಲು ಹೊಟ್ಟೆಗೆ ನಮೋನಮಃ

57.ಅನೇಕ ಪ್ರದ್ಯುಮ್ನರೂಪಗಳಿಂದ ತುಂಬಿದ ನಾರಾಯಣರೂಪಗಳಿಂದ ಏರ್ಪಟ್ಟ ಬಿಂಬನ ಕೆಳಹೊಟ್ಟೆಗೆ(ಉದರ) ನಮೋನಮಃ

58.ಅನೇಕ ನೃಸಿಂಹರೂಪಗಳಿಂದ ಶೋಭಿಸುವ ಬಿಂಬನ ಗಂಭೀರ ನಾಭಿಗೆ ನಮೋನಮಃ

59.ಅನೇಕ ರಾಮ,ಕೃಷ್ಣ,ಕಪಿಲ ರೂಪಗಳ ಜೋಡಣೆಗಳಿಂದ ಏರ್ಪಟ್ಟ್ ಬಿಂಬನ ಹಣೆ,ಕಂಠ,ಉದರದಲ್ಲಿರುವ ಮೂರುಮೂರು ರೇಖೆ(ವಲಿ) ಗಳಿಗೆ ನಮೋನಮಃ

60.ಅನೇಕ ನೃಸಿಂಹರೂಪಗಳಿಂದ ತಯಾರಾದ ಬಿಂಬನ ನಾಭಿಯ ಕೆಳಗಿನ ಪ್ರಾಂತಕ್ಕೆ ನಮೋನಮಃ

61ಅನೇಕ ವಾಸುದೇವರೂಪಗಳಿಂದ ಶೋಭಿಸುವ ಬಿಂಬನ ಮೇಢ್ರಕ್ಕೆ(ಉಪಸ್ಥೇಂದ್ರಿಯದ ಗೋಲಕ) ನಮೋನಮಃ

62. ಅನೇಕ ನಾರಾಯಣರೂಪಗಳಿಂದ ಶೋಭಿಸುವ ಬಿಂಬನ ಉಪಸ್ಥಕ್ಕೆ ನಮೋನಮಃ

63.ಅನೇಕ ವಾಸುದೇವರೂಪಗಳಿಂದ ಏರ್ಪಟ್ಟ ಬಿಂಬನ ವೃಷಣಕ್ಕೆ ಹಾಗೂ ಗುದ ಪ್ರಾಂತಕ್ಕೆ ನಮೋನಮಃ

64.ಅನೇಕ ಪ್ರದ್ಯುಮ್ನರೂಪಗಳಿಂದ ಶೋಭಿಸುವ ಬಿಂಬನ ಪಾಯು ಎಂಬ ಇಂದ್ರಿಯಕ್ಕೆ ನಮೋನಮಃ

65.ಅನೇಕ ವಾಸುದೇವರೂಪಗಳಿಂದ ಹುಟ್ಟಿದ ನಾರಾಯಣರೂಪಗಳಿಂದ ಏರ್ಪಟ್ಟ ಬಿಂಬನ ಕಟಿಪ್ರದೇಶಕ್ಕೆ ನಮೋನಮಃ

66.ಅನೇಕ ವಾಸುದೇವರೂಪಗಳಿಂದ ತುಂಬಿದ ವಾಸುದೇವರೂಪಗಳಿಂದೇ ತಯಾರಾದ ಬಿಂಬನ ಎರಡು ತೊಡೆಗಲಿಗೂ ನಮೋನಮಃ

67.ಅನೇಕ ವಾಸುದೇವರೂಪಗಳಿಂದ ತುಂಬಿದ ಸಂಕರ್ಷಣರೂಪದಿಂದ ತುಂಬಿರುವ ಬಿಂಬನ ಎರಡು ಜಾನುಗಳಿಗೆ(ಮಂಡಿ) ನಮೋನಮಃ

68.ಅನೇಕ ವಾಸುದೇವರೂಪಗಳಿಂದ ಏರ್ಪಟ್ಟ ಪ್ರದ್ಯುಮ್ನ ರೂಪಗಳಿಂದ ತಯಾರಾದ ಬಿಂಬನ ಎರಡು ಕಣಕಾಲುಗಳಿಗೆ ನಮೋನಮಃ

69.ಅನೇಕ ವಾಸುದೇವರೂಪಗಳಿಂದ ಏರ್ಪಟ್ಟ ಅನಿರುದ್ಧರೂಪಗಳಿಂದ ತಯಾರಾದ ಬಿಂಬನ ಎರಡು ಪ್ರಪದಗಳಿಗೆ ನಮೋನಮಃ

70.ಅನೇಕ ಸಂಕರ್ಷಣ ರೂಪಗಳಿಂದ ಶೋಭಿಸುವ ಬಿಂಬನ ಎರಡು ಪಾದಗಳಿಗೂ ನಮೋನಮಃ ಅಲ್ಲಿರುವ ಪಾದ ಇಂದ್ರಿಯಕ್ಕೂ ನಮೋನಮಃ

71.ಅನೇಕ ವಾಸುದೇವರೂಪಗಳಿಂದ ತಯಾರಾದ ಬಿಂಬನ ಪಾದದಲ್ಲಿರುವ ಧ್ವಜರೇಖೆಗೆ ನಮೋನಮಃ

72.ಅನೇಕ ಸಂಕರ್ಷಣರೂಪಗಳಿಂದ ಏರ್ಪಟ್ಟ ಎರಡೂ ಪಾದಗಳಲ್ಲಿರುವ ವಜ್ರರೇಖೆಗೆ ನಮೋನಮಃ

73.ಅನೇಕ ಪ್ರದ್ಯುಮ್ನ ರೂಪಗಳಿಂದ ಶೋಭಿಸುವ ಬಿಂಬನ ಎರಡು ಪಾದಗಳಲ್ಲಿರುವ ಅಂಕುಶರೇಖೆಗೆ ನಮೋನಮಃ

74.ಅನೇಕ ಅನಿರುದ್ಧರೂಪಗಳಿಂದ ಏರ್ಪಟ್ಟ ಬಿಂಬನ ಎರಡೂ ಪಾದಗಳಲ್ಲಿರುವ ಪದ್ಮರೇಖೆಗೆ ನಮೋನಮಃ

75.ಅನೇಕ ನಾರಾಯಣರೂಪಗಳಿಂದ ತೋರುವ ಬಿಂಬನ ಎರಡೂ ಪಾದಗಳ ಹೆಬ್ಬೆರಳುಗಳಿಗೂ ಹಾಗೂ ಉಗುರುಗಳಿಗೂ ನಮೋನಮಃ

76.ಅನೇಕ ವಾಸುದೇವರೂಪಗಳಿಂದ ಶೋಭಿಸುವ ಬಿಂಬನ ಎರಡೂ ಪಾದಗಳ ಎರಡನೆ ಬೆರಳು ಹಾಗೂ ಉಗುರಿಗೆ ನಮೋನಮಃ

77.ಅನೇಕ ಸಂಕರ್ಷಣ ರೂಪಗಳಿಂದ ಶೋಭಿಸುವ ಎರಡೂ ಪಾದಗಳ ಮಧ್ಯಬೆರಳು ಹಾಗೂ ಉಗುರುಗಳಿಗೂ ನಮೋನಮಃ

78.ಅನೇಕ ಪ್ರದ್ಯುಮ್ನರೂಪಗಳಿಂದ ಶೋಭಿಸುವ ಬಿಂಬನ ಎರಡೂ ಪಾದಗಳ ಅನಾಮಿಕ ಬೆರಳು ಹಾಗೂ ಉಗುಗಿಗೂ ನಮೋನಮಃ

79. ಅನೇಕ ಅನಿರುದ್ಧ ರೂಪಗಳಿಂದ ಶೋಭಿಸುವ ಬಿಂಬನ ಎರಡೂ ಪಾದಗಳ ಕಿರುಬೆರಳೂ ಹಾಗೂ ಉಗುರುಗಳಿಗೂ ನಮೋನಮಃ

80.ಅನೇಕ ನಾರಾಯಣರೂಪಗಳಿಂದ ಶೋಭಿಸುವ ಬಿಂಬನ ತ್ವಗಿಂದ್ರಿಯದ ಗೋಲಕವಾದ ಚರ್ಮಕ್ಕೆ ನಮೋನಮಃ

81.ಅನೇಕ ಸಂಕರ್ಷಣರೂಪಗಳಿಂದೇರ್ಪಟ್ಟ ತ್ವಗೀಂದ್ರಿಯಕ್ಕೆ ನಮೋನಮಃ

82.ಅನೇಕ ಅನಿರುದ್ಧರೂಪಗಳಿಂದ ಶೋಭಿಸುವ ಬಿಂಬನ ಮನಸ್ಸಿಗೆ ನಮೋನಮಃ

83.ಅನೇಕ ಪ್ರದ್ಯುಮ್ನರೂಪಗಳಿಂದ ತುಂಬಿದ ಮಾಧವರೂಪಗಳಿಂದ ಏರ್ಪಟ್ಟ ಬಿಂಬನ ಮನಸ್ಸಿಗೆ ಗೋಲಕವಾದ ಹೃದಯಕ್ಕೆ ನಮೊನಮಃ

84.ಅನೇಕ ಅನಿರುದ್ಧರೂಪಗಳಿಂದ ಶೋಭಿಸುವ ಬಿಂಬನ ಮನಸ್ಸಿನ ಪ್ರಭೇದವೆನಿಸಿದ ಮನಸ್ಸಿಗೆ ನಮೋನಮಃ

85.ಅನೇಕ ಪ್ರದ್ಯುಮ್ನರೂಪಗಳಿಂದ ತಯಾರಾದ ಬಿಂಬನ ಮನಸ್ಸಿನ ಪ್ರಭೇದವೆನಿಸಿದ ಬುದ್ಧಿಗೆ ನಮೋನಮಃ

86.ಅನೇಕ ಸಂಕರ್ಷಣರೂಪಗಳಿಂದ ಏರ್ಪಟ್ಟ ಬಿಂಬನ ಮನಸ್ಸಿನ ಪ್ರಭೇದವೆನಿಸಿದ ಚಿತ್ತಕ್ಕೆ ನಮೋನಮಃ

87.ಅನೇಕ ವಾಸುದೇವರೂಪಗಳಿಂದ ಶೋಭಿಸುವ ಬಿಂಬನ ಮನಸ್ಸಿನ ಪ್ರಭೇದವೆನಿಸಿದ ಚೇತನಕ್ಕೆ ನಮೋನಮಃ

88.ಅನೇಕ ನಾರಾಯಣರೂಪಗಳಿಂದೇರ್ಪಟ್ಟ ಬಿಂಬನ ಮನಸ್ಸಿನ ಪ್ರಭೇದವೆನಿಸಿದ ಅಹಂಕಾರಕ್ಕೆ ನಮೋನಮಃ

89.ಅನೇಕ ಸಂಕರ್ಷಣರೂಪಗಳಿಂದೇರ್ಪಟ್ಟ ಬಿಂಬನ ಕೇಶದ ಮೂಲಕ್ಕೆ ನಮೋನಮಃ

90.ಅನೇಕ ವಾಸುದೇವರೂಪಗಳಿಂದ ಶೋಭಿಸುವ ಬಿಂಬನ ಶಿರಸ್ಸಿನ ಕಪಾಲ ಉಪರಿಭಾಗಕ್ಕೆ ನಮೋನಮಃ

91.ಅನೇಕ ನಾರಾಯಣರೂಪಗಳಿಂದೇರ್ಪಟ್ಟ ಬಿಂಬನ ರೋಮಕ್ಕೆ ನಮೋನಮಃ

92.ಅನೇಕ ವರಾಹರೂಪಗಳಿಂದ ಶೋಭಿಸುವ ಬಿಂಬನ ಮಾಂಸಕ್ಕೆ ನಮೋನಮಃ

93.ಅನೇಕ ನಾರಾಯಣರೂಪಗಳಿಂದೇರ್ಪಟ್ಟ ಬಿಂಬನ ರುಧಿರಕ್ಕೆ (ರಕ್ತ) ನಮೋನಮಃ
94.ಅನೇಕ ಅನಿರುದ್ಧರೂಪಗಳಿಂದ ತಯಾರಾದ ಬಿಂಬನ ಮೇಧಸ್ಸಿಗೆ ನಮೋನಮಃ
95.ಅನೇಕ ಸಂಕರ್ಷಣಮೂರ್ತಿಗಳಿಂದೇರ್ಪಟ್ಟ ಬಿಂಬನ ಮುನ್ನೂರು ಅರವತ್ತು ಮಜ್ಜಾಗಳಿಗೆ ನಮೋನಮಃ
96.ಅನೇಕ ಅನಿರುದ್ಧರೂಪಗಳಿಂದೇರ್ಪಟ್ಟ ಬಿಂಬನ 360 ಅಸ್ಥಿಗಳಿಗೆ ನಮೋನಮಃ
97.ಅನೇಕ ನಾರಾಯಣರೂಪಗಳಿಂದೇರ್ಪಟ್ಟ ಬಿಂಬನ ಪ್ರಾಣಕ್ಕೆ ನಮೋನಮಃ
98.ಅನೇಕ ವಾಸುದೇವರೂಪಗಳಿಂದ ಶೋಭಿಸುವ ಬಿಂಬನ ಅಪಾನಕ್ಕೆ ನಮೋನಮಃ
99.ಅನೇಕ ಸಂಕರ್ಷಣರೂಪಗಳಿಂದೇರ್ಪಟ್ಟ ಬಿಂಬನ ವ್ಯಾನಕ್ಕೆ ನಮೋನಮಃ
100.ಅನೇಕ ಪ್ರದ್ಯುಮ್ನರೂಪಗಳಿಂದ ಏರ್ಪಟ್ಟ ಬಿಂಬನ ಉದಾನಕ್ಕೆ ನಮೋನಮಃ
101.ಅನೇಕ ಅನಿರುದ್ಧರೂಪಗಳಿಂದ ಏರ್ಪಟ್ಟ ಬಿಂಬನ ಸಮಾನಕ್ಕೆ ನಮೋನಮಃ
102.ಅನೇಕ ಅನಿರುದ್ಧರೂಪಗಳಿಂದ ಏರ್ಪಟ್ಟ ಬಿಂಬನ ಅನ್ನಮಯಕೋಶಕ್ಕೆ ನಮೋನಮಃ
103.ಅನೇಕ ಪ್ರದ್ಯುಮ್ನರೂಪಗಳಿಂದ ಏರ್ಪಟ್ಟ ಬಿಂಬನ ಪ್ರಾಣಮಯದೋಕೋಶಕ್ಕೆ ನಮೋನಮಃ
104.ಅನೇಕ ಸಂಕರ್ಷಣರೂಪಗಳಿಂದ ಕೂಡಿದ ಮನೋಮಯಕೋಶಕ್ಕೆ ನಮೋನಮಃ
105.ಅನೇಕ ವಾಸುದೇವರೂಪಗಳಿಂದ ಶೋಭಿಸುವ ಬಿಂಬನ ವಿಜ್ಞಾನಮಯಕೋಶಕ್ಕೆ ನಮೊನಮಃ
106.ಅನೇಕ ನಾರಾಯಣರೂಪಗಳಿಂದ ಶೊಭಿಸುವ ಬಿಂಬನ ಆನಂದಮಯಕೋಶಕ್ಕೆ ನಮೋನಮಃ
107.ಅನೇಕ ನಾರಾಯಣರೂಪಗಳಿಂದೇರ್ಪಟ್ಟ ಬಿಂಬನೊಳಗಿರುವ ಅವ್ಯಕ್ತತತ್ತ್ವಕ್ಕೆ ನಮೋನಮಃ

108.ಅನೇಕ ವಿಶ್ವರೂಪಗಳಿಂದ ಶೋಭಿಸುವ ನಮ್ಮೊಳಗಿರುವ ಸತ್ವಗುಣಕ್ಕೆ ಆಶ್ರಯವಾದ ಸತ್ವಗುಣವೆಂದು ಕರೆಸಿಕೋಂಡ ಬಿಂಬನ ಸತ್ವಗುಣಕ್ಕೆ ನಮೋನಮಃ

109.ಅನೇಕ ತೈಜಸರೂಪಗಳಿಂದ ಏರ್ಪಟ್ಟ ನಮ್ಮಲ್ಲಿರುವ ರಜೋಗುಣಕ್ಕೆ ಆಧಾರವಾದ ರಜೋಗುಣ ಎಂದು ಕರೆಸಿಕೊಂಡ ಬಿಂಬಮೂರ್ತಿಗೆ ನಮೊನಮಃ

110.ಅನೇಕ ಪ್ರಾಜ್ಞರೂಪಗಳಿಂದ ಏರ್ಪಟ್ಟ ನಮ್ಮಲ್ಲಿರುವ ತಮೋಗುಣಕ್ಕೆ ಆಧಾರವಾದ ತಮೋಗುಣ ಎಂದು ಕರೆಸಿಕೊಂಡ ಬಿಂಬನ ಅಪ್ರಾಕೃತ ಗುಣಾತ್ಮಕಮೂರ್ತಿಗೆ ನಮೋನಮಃ

111.ಅನೇಕ ವಾಸುದೇವರೂಪಗಳಿಂದ ಶೊಭಿಸುವ ನಮ್ಮಲ್ಲಿರುವ ಮಹತತ್ತ್ವಕ್ಕೆ ಆಧಾರವಾದ ಮಹತತ್ತ್ವ ಎಂದು ಕರೆಸಿಕೊಂಡ ಬಿಂಬಮೂರ್ತಿಗೆ ನಮೋನಮಃ

112.ಅನೆಕ ಸಂಕರ್ಷಣರೂಪಗಳಿಂದ ಶೋಭಿಸುವ ನಮ್ಮಲ್ಲಿರುವ ಅಹಂಕಾರತತ್ತ್ವಕ್ಕೆ ಆಧಾರವಾದ ಅಹಂಕಾರವೆಂದು ಕರೆಸಿಕೊಂಡ ಬಿಂಬಮೂರ್ತಿಗೆ ನಮೋನಮಃ

113.ಅನೇಕ ಪ್ರದ್ಯುಮ್ನರೂಪಗಳಿಂದ ಶೋಭಿಸುವ ನಮ್ಮಲ್ಲಿರುವ ವಿಜ್ಞಾನತತ್ತ್ವಕ್ಕೆ ಆಧಾರವಾದ ವಿಜ್ಞಾನತತ್ತ್ವ ಎಂಬ ಹೆಸರಿನಿಂದಿರುವ ಬಿಂಬರೂಪಕ್ಕೆ ನಮೋನಮಃ

114.ಅನೇಕ ಅನಿರುದ್ಧರೂಪಗಳಿಂದ ಶೋಭಿಸುವ ನಮ್ಮ ಮನಸ್ ತತ್ತ್ವಕ್ಕೆ ಆಧಾರವಾದ ಮನಸ್ತತ್ತ್ವವೆಂದು ಹೆಸರಿಟ್ಟುಕೊಂಡಿರುವ ಮನಸ್ತತ್ತ್ವದ ಅಧಾರಮೂರ್ತಿಗೆ ನಮೋನಮಃ

115.ಅನೇಕ ನಾರಾಯಣರೂಪಗಳಿಂದ ಶೋಭಿಸುವ ನಮ್ಮಲ್ಲಿರುವ ಆಕಾಶತತ್ತ್ವಕ್ಕೆ ಆಧಾರವಾದ ಆಕಾಶತತ್ತ್ವ ಎಂದು ಹೆಸರಿಟ್ಟುಕೊಂಡಿರುವ ಆಕಾಶತತ್ತ್ವದ ಮೂರ್ತಿಗೆ ನಮೋನಮಃ

116.ಅನೇಕ ವಾಸುದೇವರೂಪಗಳಿಂದ ಶೊಭಿಸುವ ನಮ್ಮಲ್ಲಿರುವ ವಾಯುತತ್ತ್ವಕ್ಕೆ ಆಧಾರವಾದ ವಾಯುತತ್ತ್ವ ಎಂದು ಹೆಸರಿನಿಂದಿರುವ ವಯುತತ್ತ್ವ ಎಂಬ ಬಿಂಬಮೂರ್ತಿಗೆ ನಮೋನಮಃ

117.ಅನೇಕ ಸಂಕರ್ಷಣರೂಪಗಳಿಂದ ಶೋಭಿಸುವ ನಮ್ಮಲ್ಲಿರುವ ತೇಜಸ್ ತತ್ತ್ವಕ್ಕೆ ಆಧಾರವಾದ ತೇಜಸ್ತತ್ತ್ವ ಎಂದು ಹೆಸರಿನಿಂದಿರುವ ತೇಜಸ್ತತ್ತ್ವ ಎಂಬ ಬಿಂಬಮೂರ್ತಿಗೆ ನಮೋನಮಃ

118.ಅನೇಕ ಪ್ರದ್ಯುಮ್ನರೂಪಗಳಿಂದ ಹೊಳೆಯುತ್ತಾ ನಮ್ಮಲ್ಲಿರುವ ಅಪ್ ತತ್ತ್ವಕ್ಕೆ ಆಧಾರವಾದ ಅಪ್ ತತ್ತ್ವ ಎಂದು ಹೆಸರಿನಿಂದಿರುವ ಅಪ್ ತತ್ತ್ವ ಎಂಬ ಬಿಂಬನ ಅಪ್ರಾಕೃತ ರೂಪಕ್ಕೆ ನಮೋನಮಃ

119.ಅನೇಕ ಅನಿರುದ್ಧರೂಪಗಳಿಂದ ಹೊಳೆಯುವ ನಮ್ಮಲ್ಲಿರುವ ಪೃಥ್ವೀತತ್ತ್ವಕ್ಕೆ ಆಧಾರವಾದ ಪೃಥ್ವಿತತ್ತ್ವ ಎಂಬ ಹೆಸರಿನಿಂದಿರುವ ಪೃಥ್ವಿತತ್ತ್ವ ಎಂಬ ಬಿಂಬನ ಅಪ್ರಾಕೃತರೂಪಕ್ಕೆ ನಮೋನಮಃ

120.ಅನೇಕ ನಾರಾಯಣರೂಪಗಳಿಂದ ಶೋಭಿಸುವ ನಮ್ಮಲ್ಲಿರುವ ಶಬ್ದತತ್ತ್ವಕ್ಕೆ ಆಧಾರವಾದ ಶಬ್ದತತ್ತ್ವ ಎಂಬ ಹೆಸರಿನಿಂದಿರುವ ಶಬ್ದತತ್ತ್ವ ಎಂಬ ಬಿಂಬನ ಶಬ್ದನಾಮ ರೂಪಕ್ಕೆ ನಮೋನಮಃ

121.ಅನೇಕ ವಾಸುದೇವರೂಪಗಳಿಂದ ಶೋಭಿಸುವ ನಮ್ಮಲ್ಲಿರುವ ಸ್ಪರ್ಶತತ್ತ್ವಕ್ಕೆ ಆಧಾರವಾದ ಸ್ಪರ್ಶತತ್ತ್ವ ಎಂಬ ಹೆಸರಿನಿಂದಿರುವ ಬಿಂಬನಿಗೆ ನಮೋನಮಃ

122.ಅನೇಕ ಸಂಕರ್ಷಣರೂಪಗಳಿಂದ ಏರ್ಪಟ್ಟ ನನ್ನ ರೂಪತತ್ತ್ವಕ್ಕೆ ಆಧಾರವಾದ ರೂಪತತ್ತ್ವ ಎಂದು ಹೆಸರಿಟ್ಟುಕೊಂಡಿರುವ ತದಾಕಾರ ಬಿಂಬಮೂರ್ತಿಗೆ ನಮೋನಮಃ

123.ಅನೇಕ ಪ್ರದ್ಯುಮ್ನರೂಪಗಳಿಂದ ಏರ್ಪಟ್ಟ ನನ್ನಲ್ಲಿರುವ ರಸತತ್ತ್ವಕ್ಕೆ ಆಧರವಾದ ರಸತತ್ತ್ವ ಎಂದು ಹೆಸರಿಟ್ಟುಕೊಂಡಿರುವ ಆ ಆಕಾರದಲ್ಲಿರುವ ಬಿಂಬಮೂರ್ತಿಗೆ ನಮೋನಮಃ

124.ನನ್ನೊಳಗಿರುವ ಗಂಧತತ್ತ್ವಕ್ಕೆ ಆಧಾರವಾದ ಅನೇಕ ಅನಿರುದ್ಧರೂಪಗಳಿಂದ ಏರ್ಪಟ್ಟ ಗಂಧತತ್ತ್ವ ಎಂದು ಹೆಸರು ಆಕಾರ ಧರಿಸಿದ ಬಿಂಬಮೂರ್ತಿಗೆ ನಮೋನಮಃ

125.ನನ್ನ ಶರೀರದೊಳಗೆ ಹಿಂಭಾಗದಲ್ಲಿರುವ ವಜ್ರಿಕಾನಾಡಿಗೆ ಆಧಾರವಾದ ಹಳದಿ ಬಣ್ಣದ ಪ್ರದ್ಯುಮ್ನರೂಪಗಳಿಂದ ಏರ್ಪಟ್ಟ ವಜ್ರಿಕಾನಾಡಿಯ ಆಧಾರವಾದ ಆ ಹೆಸರಿಟ್ಟುಕೊಂಡ ಬಿಂಬನಿಗೆ ನಮೋನಮಃ

126.ನನ್ನ ಶರೀರದೊಳಗೆ ಎಡಭಾಗದಲ್ಲಿ ಶೋಭಿಸುವ ಆರ್ಯ ಎಂಬನಾಡಿಗೆ ಆಧಾರವಾದ ಅದೇ ಹೆಸರು ರೂಪಗಳಿಂದ ಶೋಭಿಸುವ ಅನೇಕ ನೀಲವರ್ಣ ಅನಿರುದ್ಧರೂಪಗಳಿಂದ ತಯಾರಾದ ಬಿಂಬನಿಗೆ ನಮೋನಮಃ

127.ನನ್ನ ಶರೀರದೊಳಗೆ ಮುಂಭಾಗದಲ್ಲಿರುವ ಪ್ರಕಾಶಿನಿ ಎಂಬ ನಾಡಿಗೆ ಆಧಾರವಾದ ಅದೇ ಆಕಾರ ಹೆಸರುಗಳನ್ನಿಟ್ಟುಕೊಂಡ ಅನೇಕ ಬಿಳಿಬಣ್ಣದ ವಾಸುದೇವರೂಪಗಳಿಂದ ಏರ್ಪಟ್ಟ ಬಿಂಬಮೂರ್ತಿಗೆ ನಮೋನಮಃ

128.ನನ್ನ ಶರೀರದೊಳಗೆ ದಕ್ಷಿಣದಲ್ಲಿರುವ ವೈದ್ಯುತಾ ಎಂಬ ನಾಡಿಗೆ ಆಧಾರವಾಗಿ ಅದೇ ಆಕಾರ ಹೆಸರುಗಳಿಂದ ಶೋಭಿಸುವ ಅನೇಕ ಪಿಂಗಳ ವರ್ಣದ ಸಂಕರ್ಷಣರೂಪಗಳಿಂದ ಏರ್ಪಟ್ಟ ಬಿಂಬಮೂರ್ತಿಗೆ ನಮೋನಮಃ

129. ನನ್ನ ಶರೀರದೊಳಗಿರುವ ಬ್ರಹ್ಮನಾಡಿಗೆ ಆಧಾರಭೂತವಾದ ಬ್ರಹ್ಮನಾಡಿ ಎಂದು ಕರೆಸಿಕೊಂಡ ಆ ಆಕಾರದಲ್ಲೇ ಇರುವ ಅನೇಕ ರಕ್ತವರ್ಣ ನಾರಾಯಣ ರೂಪಗಳಿಂದ ಏರ್ಪಟ್ಟ ಬಿಂಬನಿಗೆ ನಮೋನಮಃ

130.ನನ್ನ ಶರೀರದೊಳಗೆ ಸುಷುಮ್ನಾನಾಡಿಯ ನಾಲ್ಕು ದಿಕ್ಕುಗಳಲ್ಲಿ ನಿಂತು ಒಂದೊಂದು ದಿಕ್ಕಿನಲ್ಲಿ25ರ ಪ್ರಕಾರ ಇರುವ 100 ನಾಡಿಗಳಲ್ಲಿ,100 ನಾಡಿಗಳ ಆಕಾರದಿಂದ ಅ ಹೆಸರೇ ಇಟ್ಟುಕೊಂಡಿರುವ ನಾರಾಯಣಾದಿ 100 ರೂಪಗಳಿಂದ ತಯಾರಾದ ಬಿಂಬನ 100 ನಾಡೀ ರೂಪಕ್ಕೆ ನಮೋನಮಃ

131.ಆ ನೂರುನಾಡಿಗಳಲ್ಲಿ ಪಶ್ಚಿಮದಲ್ಲಿರುವ 25 ವಜ್ರಿಕಾ ಎಂದು ಹೆಸರಿನಿಂದಿರುವ ನಾಡಿಗಳ ಮಧ್ಯ ಪ್ರಧಾನ ವಜ್ರಿಕಾ ನಾಡಿಗೆ ಆಧಾರವಾಗಿ ಆ ಹೆಸರು ಹಾಗೂ ಆಕಾರದಿಂದಿರುವ ಅನೇಕ ಪ್ರದ್ಯುಮ್ನರೂಪಗಳಿಂದ ಏರ್ಪಟ್ಟ ಬಿಂಬನ ವಜ್ರಿಕಾ ಎಂಬ ನಾಡಿರೂಪಕ್ಕೆ ನಮೋನಮಃ

132.ಎಡಭಾಗದಲ್ಲಿರುವ ಇಡಾ ಎಂದು ಹೆಸರಿನಿಂದ 25 ನಾಡಿಗಳ ಮಧ್ಯಯಿರುವ ಇಡಾ ಎಂಬ ಪ್ರಧಾನನಾಡಿಯ ಹೆಸರು ಆಕಾರದಿಂದಿರುವ ಅನೇಕ ಅನಿರುದ್ಧರೂಪಗಳಿಂದ ಏರ್ಪಟ್ಟ ಬಿಂಬಮೂರ್ತಿಯ ಇಡಾ ಎಂಬ ನಾಡೀರೂಪಕ್ಕೆ ನಮೋನಮಃ

133 ಪೂರ್ವದಲ್ಲಿರುವ ಧಾರಣೀ ಎಂಬ ಹೆಸರಿನ 25 ನಾಡಿಗಳಮಧ್ಯದಲ್ಲಿರುವ ಪ್ರಧಾನ ಧಾರಣೀ ನಾಡಿಯ ಆಕಾರ ಹೆಸರು ಇರುವ ಅನೇಕ ವಾಸುದೇವರೂಪಗಳಿಂದ ಏರ್ಪಟ್ಟ ಬಿಂಬಮೂರ್ತಿಯ ಧಾರಣೀ ಎಂಬ ನಾಡಿರೂಪಕ್ಕೆ ನಮೋನಮಃ

134.ದಕ್ಷಿಣದಲ್ಲಿರುವ ಪಿಂಗಳಾನಾಮಕ 25ನಾಡಿಗಳ ಮಧ್ಯ ಹೊಳೆವ ಪ್ರಧಾನನಾಡಿಯ ಆಕಾರ, ಹೆಸರಿನಿಂದಿರುವ ಅನೇಕ ಸಂಕರ್ಷಣರೂಪಗಳಿಂದ ತಯಾರಾದ ಬಿಂಬನ ಪಿಂಗಳ ಎಂಬ ನಾಡೀರೂಪಕ್ಕೆ ನಮೋನಮಃ

135.ನನ್ನೊಳಗಿರುವ 72,000 ನಾಡೀ ರೂಪದಿಂದ 72,000 ಬೃಹತೀಸಹಸ್ರನಾಮಗಳಿಂದ ಪ್ರತಿಪಾದ್ಯನಾದ ಗರುಡವಾಹನನಾದ ಮಹಾಲಕ್ಷ್ಮೀ ಸಮೇತನಾದ ಬಿಂಬಾತ್ಮಕ ಶ್ರೀಮನ್ನಾರಾಯಣ ಸ್ತ್ರೀಪುರುಷ ರೂಪಗಳಿಗೆ ನಮೋನಮಃ

136.ನನ್ನ ಶರೀರದೊಳಗಿರುವ ಇದೇ ರೀತಿಯಲ್ಲಿ 72,000 ನಾಡಿಗಳಿಂದ ಹುಟ್ಟಿದ ಅನೇಕ ಅವಾಂತರ ನಾಡಿಗಳಲ್ಲಿ ಅದೇ ರೂಪ ಅದೇ ಹೆಸರಿಟ್ಟುಕೊಂದಿರುವ ಅನೇಕ ಬೃಹತೀಸಹಸ್ರ ಸ್ವರಾಕ್ಷರ ಪ್ರತಿಪಾದ್ಯ ರೂಪಳಿಂದ, ವ್ಯಂಜನಾಕ್ಷರ ಪ್ರತಿಪಾದ್ಯ ರೂಪಗಳಿಂದಲೂನೂ ಏರ್ಪಟ್ಟ ಬಿಂಬನ ಅನೇಕ ರೂಪಗಳಿಂದ ಶೊಭಿಸುವ ಬಿಂಬನ ಅನಂತ ನಾಡೀ ಸಮುದಾಯಕ್ಕೆ ನಮೋನಮಃ

137.ಅನೇಕ ಅನಿರುದ್ಧರೂಪಗಳಿಂದ ತುಂಬಿದ ಮತ್ಸ್ಯರೂಪಗಳಿಂದ ಏರ್ಪಟ್ಟ ಬಿಂಬನ ಶಿರಸ್ಸಿನಲ್ಲಿರುವ ಕಿರೀಟದ ಆಭರಣಕ್ಕೆ ನಮೋನಮಃ

138.ಅನೇಕ ಅನಿರುದ್ಧರೂಪಗಳಿಂದ ತುಂಬಿದ ಕೂರ್ಮರೂಪಗಳಿಂದ ಏರ್ಪಟ್ಟ ಬಿಂಬನ ಕರ್ಣಗಳಲ್ಲಿರುವ ಕುಂಡಲಾದಿ ಆಭರಣರೂಪಗಳಿಗೆ ನಮೋನಮಃ

139.ಅನೇಕ ಅನಿರುದ್ಧರೂಪಗಳಿಂದ ತುಂಬಿದ ವರಾಹರೂಪಗಳಿಂದ ಏರ್ಪಟ್ಟ ಬಿಂಬನ ಕಂಠದಲ್ಲಿರುವ ಕೌಸ್ತುಭ ಮೊದಲಾದ ಆಭರಣಕ್ಕೆ ನಮೋನಮಃ

140.ಬೃಹತೀಸಹಸ್ರ ಋಕ್ಕುಗಳಲ್ಲಿ ಮೊದಲ 240ರುಕ್ಕುಗಳಿಂದ ಪ್ರತಿಪಾದ್ಯವಾದ ಅನೇಕ ಬಿಳಿಯಬಣ್ಣದ ವಾಸುದೇವರೂಪಗಳಿಂದ ಏರ್ಪಟ್ಟ 80ರೂಪದ ಮೂರುಪದರ ಬಿಂಬನ ಮುತ್ತಿನಮಾಲಾ ರೂಪದ ಭಗಾವಂತನಿಗೆ ನಮೋನಮಃ

141.ಬೃಹತೀಸಹಸ್ರ ಋಕ್ಕುಗಳಲ್ಲಿ ಎರಡನೆಯ 240ಋಕ್ಕುಗಳಿಂದ ಪ್ರತಿಪಾದ್ಯನಾದ ಅನೇಕ ಪಿಂಗಳ ವರ್ಣದ ಸಂಕರ್ಷಣರೂಪದಿಂದ ಏರ್ಪಟ್ಟ 80ರೂಪಗಳ ಮೂರುಪದರದ ಬಿಂಬನ ವೈಡೂರ್ಯ್ ಮಾಲಾರೂಪಕ್ಕೆ ನಮೋನಮಃ

142.ಬೃಹತೀ ಋಕ್ಕುಗಳಲ್ಲಿ ಮೂರನೆಯ 240ಋಕ್ಕುಗಳಿಂದ ಪ್ರತಿಪಾದ್ಯನಾದ ಅನೇಕ ಹಳದಿವರ್ಣದ ಪ್ರದ್ಯುಮ್ನ ರೂಪದಿಂದ ಏರ್ಪಟ್ಟ 80ರೂಪಗಳ ಮೂರುಪದರದಿಂದ ಎರ್ಪಟ್ಟ ಬಿಂಬನ ಬಂಗಾರದ ಕಾಸಿನಮಾಲಾ ರೂಪಕ್ಕೆ ನಮೋನಮಃ

143.ಬೃಹತೀಸಹಸ್ರದ 720ಋಕ್ಕುಗಳ ನಂತರ ಬರುವ (ಪ್ರತಿಪಾದ್ಯ) 50–50(ರೂಪದ) ಋಕ್ಕುಗಳಿಂದ ಏರ್ಪಟ್ಟ ಅನೇಕ ಅನಿರುದ್ಧರೂಪಗಳಿಂದ ಏರ್ಪಟ್ಟ ಅನೇಕ ರಕ್ತವರ್ಣ ನಾರಾಯಣರೂಪದಿಂದ ತಯಾರಾದ ಬಿಂಬನ 50ರ ಎರಡು ಪದರದ ರತ್ನಮಾಲಾ ರೂಪಕ್ಕೆ ನಮೋನಮಃ

144.ಬೃಹತೀಸಹಸ್ರದ 820 ಋಕ್ಕುಗಳ ನಂತರ ಬರುವ 180ಋಕ್ಕುಗಳಿಂದ ಪ್ರತಿಪಾದ್ಯನಾದ ನೀಲವರ್ಣದ ಅನಿರುದ್ಧ ರೂಪಗಳಿಂದ ಏರ್ಪಟ್ಟ ನೃಸಿಂಹರೂಪಗಳಿಂದ ತಯಾರಾದ ನೃಸಿಂಹರೂಪಗಳಿಂದ ಶೋಭಿಸುವ 90ರ ಎರಡು ಪದರದ ಬಿಂಬನ ಇಂದ್ರನೀಲಮಣಿ ಮಾಲಾರೂಪಕ್ಕೆ ನಮೋನಮಃ

145.ಅನೇಕ ನೃಸಿಂಹರೂಪಗಳಿಂದ ಏರ್ಪಟ್ಟ ವಾಮನ ರೂಪಗಳಿಂದ ಶೋಭಿಸುವ ಬಿಂಬನ ಬಾಹುಗಳಲ್ಲಿರುವ ಕೇಯೂರ ಮೊದಲಾದ ಆಭರಣರೂಪಕ್ಕೆ ನಮೋನಮಃ

146.ಅನೇಕ ನೃಸಿಂಹರೂಪಗಳಿಂದ ತುಂಬಿದ ಭಾರ್ಗವರೂಪಗಳಿಂದ ಏರ್ಪಟ್ಟ ಬಿಂಬನ ಸೊಂಟದಲ್ಲಿರುವ ಬಂಗಾರದ ಡಾಬು,ಉಡಿದಾರ ಮೊದಲಾದ ಆಭರಣಕ್ಕೆ ನಮೋನಮಃ

147.ಅನೇಕ ಸಂಕರ್ಷಣರೂಪಗಳಿಂದ ತುಂಬಿದ ರಾಮರೂಪಗಳಿಂದ ಏರ್ಪಟ್ಟ ಬಿಂಬನ ಪಾದಗಳಲ್ಲಿರುವ ಗೆಜ್ಜೆ ಕಡಗ ಮೊದಲಾದ ಆಭರಣರೂಪಕ್ಕೆ ನಮೋನಮಃ

148.ಅನೇಕ ಸಂಕರ್ಷಣರೂಪಗಳಿಂದ ತುಂಬಿದ ಕೃಷ್ಣರೂಪಗಳಿಂದ ಏರ್ಪಟ್ಟ ಬಿಂಬನ ಕರಗಳಲ್ಲಿರುವ ಕಂಕಣ ಆಭರಣರೂಪಕ್ಕೆ ನಮೋನಮಃ

149.ಅನೇಕ ಸಂಕರ್ಷಣ ರೂಪಗಳಿಂದ ತುಂಬಿದ ಕಲ್ಕಿರೂಪಗಳಿಂದ ಏರ್ಪಟ್ಟ ಬಿಂಬನ ಹಸ್ತದ ಬೆರಳಿನಲ್ಲಿರುವ ಅಂಗುಲೀಯಕಾದಿ ಆಭರಣರೂಪಕ್ಕೆ ನಮೋನಮಃ

150.ಅನೇಕ ಪ್ರದ್ಯುಮ್ನ ಸಂಕರ್ಷಣ ರೂಪಗಳಿಂದ ತುಂಬಿದ ಮತ್ಸ್ಯಾದಿ ನವರೂಪದಿಂದ ಏರ್ಪಟ್ಟ ಬಿಂಬನ ಸರ್ವಾಭರಣಗಳಲ್ಲಿ ಖಚಿತವಾದ ನವರತ್ನರೂಪಗಳಿಗೆ ನಮೋನಮಃ

151.ಅಧಮಾಧಿಕಾರಿಗಳಿಂದ ಉಪಾಸ್ಯವಾದ ಆತ್ಮತ್ವ ಎಂಬ ಅನಿರುದ್ಧರೂಪಗಳಿಂದ ತಯಾರಾದ ಬಿಂಬನ "ಆತ್ಮ" ಗುಣಕ್ಕೆ ನಮೋನಮಃ

152.ಮನುಷ್ಯೋತ್ತಮರಿಂದ ಉಪಾಸ್ಯವಾದ ಅನೇಕ ವಾಸುದೇವರೂಪಗಳಿಂದ ಏರ್ಪಟ್ಟ ಬಿಂಬನ "ಆನಂದ" ಗುಣಕ್ಕೆ ನಮೋನಮಃ

153.ಮನುಷ್ಯೋತ್ತಮರಿಂದ ಉಪಾಸ್ಯವಾದ ಅನೇಕ ಸಂಕರ್ಷಣ ರೂಪಗಳಿಂದ ಏರ್ಪಟ್ಟ ಬಿಂಬನ "ಚಿತ್/ಜ್ಞಾನ" ಗುಣಕ್ಕೆ ನಮೋನಮಃ

154.ಅನೇಕ ಪ್ರದ್ಯುಮ್ನರೂಪಗಳಿಂದ ಏರ್ಪಟ್ಟ ಬಿಂಬನ "ಸತ್" ಗುಣಕ್ಕೆ ನಮೋನಮಃ

155.ಇದೇ ರೀತಿಯಲ್ಲಿ ಇಚ್ಛಾ,ಧೃತಿ,ವೀರ್ಯ,ಔದಾರ್ಯ,ಪ್ರಾಗಲ್ಭ್ಯ,ವಿರಾಗ ಶಮ,ದಮ ಮೊದಲಾದ ಅನಂತ ಗುಣಗಳಿಂದ,ಅನಂತ ರೂಪಗಳಿಂದ ಶೋಭಿಸುವ ಬಿಂಬನ ಅನಂತ ರೂಪಗಳಿಗೆ ನಮೋನಮಃ

156.ಅನಂತ ವಿಶ್ವರೂಪಗಳಿಂದ ಶೋಭಿಸುವ ಬಿಂಬನ "ಸೃಷ್ಠಿ" ಎಂಬ ಕ್ರಿಯೆಗೆ ನಮೋನಮಃ

157.ಅನೇಕ ತೈಜಸ ಮೂರ್ತಿಗಳಿಂದ ಶೋಭಿಸುವ ಬಿಂಬನ "ಪಾಲನಾ" ಕ್ರಿಯೆಗೆ ನಮೋನಮಃ

158.ಅನೇಕ ಪ್ರಾಜ್ಞರೂಪಗಳಿಂದ ಶೋಭಿಸುವ ಬಿಂಬನ "ಸಂಹಾರ" ಕ್ರಿಯೆಗೆ ನಮೋನಮಃ

159.ಅನಂತ ರೂಪಗಳಿಂದ ಏರ್ಪಟ್ಟ ಬಿಂಬನ ಅನಂತ ಕ್ರಿಯೆಗಳಿಗೆ ನಮೋನಮಃ

160.ಈ ರೀತಿಯಲ್ಲಿ ಅನಂತ ಅನಂತರೂಪಗಳಿಂದ ಕೂಡಿದ ಬಿಂಬನ ಒಂದೊದು ರೂಪಕ್ಕೂ ನಮೋನಮಃ

161.ಅನಂತಾನಂತ ಕ್ರಿಯಾರೂಪಗಳಿಂದ ಕೂಡಿದ ಬಿಂಬನ ಒಂದೊಂದು ಕ್ರಿಯೆಗೂ ನಮೋನಮಃ

162.ಅನಂತರೂಪಗಳಿಂದ ತುಂಬಿದ ಗುಣಗಳಿಂದ ಏರ್ಪಟ್ಟ ಬಿಂಬನ ಅನಂತಗುಣಾತ್ಮಕ ಕ್ರಿಯೆಗೂ ನಮೋನಮಃ
163.ಅನಂತಾನಂತ ಕ್ರಿಯಾರೂಪಗಳಿಂದ ಶೋಭಿಸುವ ಭಗವಂತನಾದ ಬಿಂಬನ ಒಂದೊಂದು ಕ್ರಿಯೆಗೂ ನಮೋನಮಃ
164.ಇಲ್ಲಿ ಪ್ರತಿಯೊಂದು ಕಡೆಗೂ ನಮೋನಮಃ ಎಂದು ಹೇಳಿದಾಗ ಈ ರೀತಿ ಅನುಸಂಧಾನ ಇರಬೇಕು "ಷೋಡಶೋಪಚಾರ ಪೂಜೆಗಳಲ್ಲಿ ಏನೆಲ್ಲಾ ಭಗವದ್ರೂಪಗಳು – ಪದಾರ್ಥಗಳಲ್ಲೂ, ಸಲಕರಣೆಗಳಲ್ಲೂ, ಸಕಲ ಕಾಯಕ, ಮಾನಸಿಕ ಕ್ರಿಯೆಗಳಲ್ಲೂ ಇದ್ದ ಪ್ರಕಟವಾದ ದೇವರ ಅನಂತರೂಪಗಳು ನಮಃ ಎಂದು ನುಡಿದಾಗ ಪ್ರಕಟವಾಗುವ ಭಗವದ್ರೂಪಗಳಲ್ಲಿ ಇದ್ದೇಇವೆ ಎಂದು ದೃಢವಾಗಿ ತಿಳಿದು ನಮಃ ಎಂದು ನುಡಿಯುವುದರ ಮೂಲಕ ದೇವರ ಪ್ರತಿಯೋಂದು ರೂಪಕ್ಕೂ ಷೋಡಶೋಪಚಾರ ಪೂಜೆಗಳನ್ನು ತನ್ಮೂಲಕ ತತ್ತ್ವಾಭಿಮಾನಿ ದೇವತೆಗಳು ಅರ್ಪಣೆ ಮಾಡುತ್ತಿದ್ದಾರೆಂದು ತಿಳಿದು ಪರಮಾದರ ಪೂರ್ವಕ ವಿಶ್ವಾಸದಿಂದ ಭಕ್ತಿಯಿಂದ ನಿರಂತರವೂ ನೆನೆಯಬೇಕು".
ಈ ರೀತಿಯ ನೆನಪು ದಿನದಿನವೂ ಆದರಪೂರ್ವಕ ನಿರಂತರವಾಗಿದ್ದರೇನೇ ಅದಕ್ಕೆ "ಸಾಧನೆ" ಎಂದು ಹೆಸರು.

॥ಶ್ರೀ ಕೃಷ್ಣಾರ್ಪಣಮಸ್ತು॥

## ಸ್ಥೂಲಶರೀರ ಸೃಷ್ಠಿ ಪ್ರಕರಣ

ಅನಾದಿ ಕಾಲದಿಂದ ನನ್ನ ದೇಹದಲ್ಲಿ ಮುಖದಲ್ಲಿ ಮುಖವೆಂಬ ಕ್ರಮದಿಂದ ನನ್ನ ಸಕಲ ಅವಯವಗಳಲ್ಲೂ ರಮಾದೇವಿಯ ಅವಯವಗಳಿಂದ ವ್ಯಾಪಿಸಿ ನಿಂತಿರುವ ನನ್ನ ಬಿಂಬಮೂರ್ತಿಗೆ ನಮೋನಮಃ
ನನ್ನ ಕರ್ಮಾನುಸಾರ ಆಯಾ ದೇಹಗಳನ್ನು ಕೊಡುತ್ತಾ ಅಲ್ಲಲ್ಲಿ ತನ್ನ ಗುಣಗಳ ಮೂಲಕ ನನ್ನ ಗುಣಗಳನ್ನು, ತನ್ನ ಕ್ರಿಯೆಗಳ ಮೂಲಕ ನನ್ನ ಕ್ರಿಯೆಗಳನ್ನು ಅನಾದಿಕಾಲದಿಂದ ಹಿಡಿದು ಅನಂತಕಾಲದವರೆಗೂ ಪ್ರಕಟ ಮಾಡಿದ, ಮಾಡುತ್ತಿರುವ ನನ್ನ ಬಿಂಬಮೂರ್ತಿಗೆ ನಮೋನಮಃ

ಲಯಕಾಲದ ಅನಂತರ ತನ್ನ ದೃಷ್ಠಿಯಿಂದಲೇ ಉದರದಲ್ಲಿರುವ ಮುಕ್ತರಾದವರನ್ನು ಧ್ಯಾನದಲ್ಲಿರುವಂತೆ ಮಾಡಿದ, ಸೃಷ್ಠಿಯಾಗಬೇಕಾದವರನ್ನು ಮೇಲಕ್ಕೆ ತಂದು, ಮುಂದೆ ಸೃಷ್ಠಿಯಾಗುವವರನ್ನು ನಿದ್ರೆಯಲ್ಲಿಯೇ ಮಲಗಿಸಿದ ದೇವರ ಅಧ್ಭುತವಾದ ನೋಟಕ್ಕೆ ನಮೋನಮಃ

ಜಗತ್ತನ್ನು ಸೃಷ್ಠಿಮಾಡಿ,ಸ್ಥಿತಿಮಾಡಿ, ಸಂಹಾರ ಮಾಡುವುದಕ್ಕಾಗಿ ಜ್ಞಾನೋಪದೇಶಕ್ಕಾಗಿ ದುಷ್ಟ ಭಯ ಪರಿಹಾರಕ್ಕಾಗಿ ತಾನೇ ಹೇಳಿದ ಧರ್ಮದ ಪರಿಪಾಲನೆಗಾಗಿ ಅನಂತ ರೂಪಗಳನ್ನು ಚೂರು ವಿಕಾರವಿಲ್ಲದೆ ಸ್ವೀಕಾರ ಮಾಡಿದ ಭಗವಂತನ ರೂಪಗಳ ಸೃಷ್ಟಿ ಎಂದು ಕರೆಸಿಕೊಂಡ "ಶುದ್ಧ" ಸೃಷ್ಟಿಗೆ ನಮೋನಮಃ

ದೇವರ ವಿಶ್ವ,ತೈಜಸ ರೂಪಗಳಿಂದ ಪ್ರೇರಿತರಾಗಿ ಏರ್ಪಟ್ಟ ಅವ್ಯಕ್ತ ಪ್ರಕೃತಿ, ವ್ಯಕ್ತ ಪ್ರಕೃತಿ,ವ್ಯಕ್ತಾವ್ಯಕ್ತ ಪ್ರಕೃತಿ ಎಂಬ ಮೂರು ರೂಪದಲ್ಲಿ ನಿಂತ ಶ್ರೀ, ಭೂ, ದುರ್ಗಾಂತರ್ಗತ ವಿಶ್ವ, ತೈಜಸ, ಪ್ರಾಜ್ಞ ರೂಪಗಳಿಂದ ಅಭಿನ್ನವಾದ ನನ್ನ ಬಿಂಬಮೂರ್ತಿಗೆ ನಮೋನಮಃ

ವ್ಯಕ್ತಾವ್ಯಕ್ತ ಪ್ರಕೃತಿ ಎಂದು ಕರೆಸಿಕೊಂಡ ಸತ್ವ, ರಜಸ್ಸು ,ತಮೋಗುಣಗಳಾದ ಮೂರರಲ್ಲೂ ನಿಂತ ಶ್ರೀ ಭೂ ದುರ್ಗಾಂತರ್ಗತ ವಿಶ್ವ ತೈಜಸ ಪ್ರಾಜ್ಞ ರೂಪಗಳಿಂದ ಅಭಿನ್ನವಾದ ನನ್ನ ಬಿಂಬಕ್ಕೆ ನಮೋನಮಃ

ವ್ಯಕ್ತಪ್ರಕೃತಿ ಎಂದು ಕರೆಸಿಕೊಂಡ ಇಡೀ ಬ್ರಹ್ಮಾಂಡದೊಳಗೆ ಕಣಕಣದಲ್ಲಿ ತುಂಬಿದ ಮೂರು ಗುಣಗಳಲ್ಲೂ ತನ್ನ ಮೂರು ರೂಪವನ್ನಿಟ್ಟು ಬ್ರಹ್ಮಾಂಡ ಸೃಷ್ಟಿಸಿದ ಭಗವಂತನ ವಿರಾಟ್ರೂಪಕ್ಕೆ ನಮೋನಮಃ

24ತತ್ವಗಳಲ್ಲೂ, ತತ್ವಾಭಿಮಾನಿ ದೇವತೆಗಳಲ್ಲೂ ಅವರವರಿಗೆ ಕೊಟ್ಟ ಶರೀರಗಳಲ್ಲೂ ಅನಂತ ಭಗಾವದ್ರೂಪಗಳಿಗೂ, ಆ ದೇವತೆಗಳ ಮೂಲಕ ಕಟ್ಟಿಸಿದ ಬ್ರಹ್ಮಾಂಡದೊಳಗೆ, ಬ್ರಹ್ಮದೇವರ ಮೂಲಕ ಹದಿನಾಲ್ಕು ಲೋಕಗಳನ್ನು ನಿರ್ಮಿಸಿ, ನೀರು, ಬೆಂಕಿ, ಮಣ್ಣು ಮೂರರಲ್ಲಿ, ಒಂಬತ್ತು ಜನ ದೇವತೆಗಳನ್ನಿಟ್ಟು ಎಲ್ಲರ ದೇಹಗಳನ್ನು ಕೊಟ್ಟು ಪ್ರತಿಯೊಂದು ದೇಹದಲ್ಲೂ ನಿಂತು ವ್ಯಾಪಾರ ಮಾಡಿಸುವ ಭಗವದ್ರೂಪಕ್ಕೆ ಅಭಿನ್ನ ಬಿಂಬರೂಪಕ್ಕೆ ನಮೋನಮಃ

ನನ್ನ ಕರ್ಮಾನುಸಾರ ಕರ್ಮನಾಮಕನಾಗಿ ನಿಂತು ನನ್ನ ತಂದೆ ಒಳಗೆ ಪ್ರದ್ಯುಮ್ನನಾಮಕನಾಗಿ ನಿಂತು ಉಂಡ ಅನ್ನ ಶ್ರೀ, ಪ್ರಾಣ, ರುದ್ರರ ಮೂಲಕ ಮೂರುಭಾಗ ಮಾಡಿಸಿ ಏರ್ಪಟ್ಟ ರೇತಸ್ಸಿನಲ್ಲಿ ನನ್ನ ಜೊತೆಗೆ ಸಂಕರ್ಷಣನಾಗಿ ತಾನೇ ಇದ್ದು, ತಂದೆಯ ಆಕಾರದ ಪ್ರದ್ಯುಮ್ನ ರೂಪದಿಂದ, ತಾಯಿಯ ಆಕಾರದ ಅನಿರುದ್ಧನ ಗರ್ಭದಲ್ಲಿ, ರೇತಸ್ಸಿನೊಳಗಿರುವ ನನ್ನ ಜೊತೆಗೆ ಬಂದು, ನಿಂತ ಸಂಕರ್ಷಣಮೂರ್ತಿಗೆ ಅವನಿಂದ ಅಭಿನ್ನನಾದ ನನ್ನ ಬಿಂಬನಿಗೆ ನಮೋನಮಃ ತಾಯಿಯ ಗರ್ಭದಲ್ಲಿ ರೇತಸ್ಸಿನೊಳಗೆ ನನ್ನ ಜೊತೆಗೇ ಇದ್ದು ಜೀರ್ಣವಾಗದಂತೆ ಕಪಾಡಿದ ಅನಿರುದ್ಧ ರೂಪಕ್ಕೆ ಅನಂತ ಕೋಟಿ ನಮಸ್ಕರಗಳು.

ನನ್ನ ಕರ್ಮಾನುಸಾರ ನನ್ನ ಶರೀರದ ಅವಯವಗಳನ್ನು ವಾಯುದೇವರ ಮೂಲಕ ನಿರ್ಮಾಣ ಮಾಡಿಸಿದ ಸಂಕರ್ಷಣ ನಾಮಕ ರೂಪದಿಂದಿರುವ ನನ್ನ ಬಿಂಬಮೂರ್ತಿಗೆ ನಮೋನಮಃ

84ಲಕ್ಷ ಶರೀರಗಳಿಂದ ಭಿನ್ನವಾದ ಸುಂದರವಾಗಿ ಎಲ್ಲಾ ಜ್ಞಾನ ಪಡೆದುಕೊಳ್ಳಲಿಕ್ಕೆ ಸಾಧನವಾದ ಇಂತಹ ಶರೀರವನ್ನು ನನಗೆ ಕೊಟ್ಟು ಧಾರಣೆ ಮಾಡಿದ ವಾಸುದೇವಾದಿ ರೂಪಗಳಿಗೂ, ಅನೇಕ ಕಮಲಗಳೂ, ನಾಡಿಗಳಿಗೂ ಆಧಾರವಾದ ಅನಂತ ಭಗವದ್ರೂಪಗಳಿಗೆ ನಮೋನಮಃ

ನನ್ನ ಶಿರಸ್ಸು ಮೊದಲುಗೊಂಡು ಪಾದಪರ್ಯಂತ ಸಕಲ ಅವಯವಗಳಲ್ಲಿ ಸಕಲ ಇಂದ್ರಿಯಗಳಲ್ಲಿ ಸಕಲ ಧಾತುಗಳಲ್ಲಿ ನಿಂತ ಎಲ್ಲಾ ಭಗವದ್ರೂಪಗಳಿಗೂ (ಬಿಂಬ ಸಂಸ್ಥಾಪನದಲ್ಲಿ ಹೇಳಿದಂತೆ) ನಮೋನಮಃ

ಚೇಷ್ಟಾಪ್ರದನಾಗಿ ವಿಶ್ವ, ತೈಜಸ, ಪ್ರಾಜ್ಞರೂಪಗಳಿಂದ ಜಾಗ್ರುತ್, ಸ್ವಪ್ನ, ಸುಷುಪ್ತಿ ಅವಸ್ಥಾಗಳಿಗೆ ಕಾರಣವಾದ ಭಗವದ್ರೂಪಗಳಿಗೆ ನಮೋನಮಃ

ನನ್ನ ಶರೀರದೊಳಗೆ ನಿಂತ ಭಗವಂತನ ಅನಂತ ಧಾರಕ, ಅನಂತ ಪೋಷಕ ರೂಪಗಳಿಗೂ. ಅನಂತ ಚೇಷ್ಟಕ ರೂಪಗಳಿಗೂ, ಅನಂತ ಪ್ರೇರಕ ರೂಪಗಳಿಗೂ ನಮೋನಮಃ

ಪ್ರಾಣ,ಅಪಾನ,ವ್ಯಾನ,ಉದಾನ,ಸಮಾನರೆಂಬ ದಾಸಪ್ರಾಣರಲ್ಲಿ ಕ್ರಮವಾಗಿ ನಿಂತ ಪ್ರಾಣದೇವರ ಐದು ರೂಪಗಳಿಗೂ, ಅಲ್ಲಿ ನಿಂತ ಭಗವದ್ರೂಪಗಳಿಗೂ ನಮೋನಮಃ

(ಸದಾ ಆದರಪೂರ್ವಕವಾದ ಭಗವಂತನ ಚಿಂತನೆ ಪ್ರತಿದಿನವೂ, ಪ್ರತಿಕ್ಷಣವೂ ನಿಮ್ಮ ದಯದಿಂದ ನನಗೆ ಎಡಬಿಡದೆ ಬರುವಂತೆ ಅನುಗ್ರಹಿಸಿ).

ಗುಣತ್ರಯದಲ್ಲಿ ನಿಂತ ಬ್ರಹ್ಮ ರುದ್ರ ಇಂದ್ರ ಸ್ಕಂದರು ಅವರವರ ಪತ್ನಿಯರು ಅಲ್ಲಲ್ಲಿ ನಿಂತ ಭಗವದ್ರೂಪಗಳಿಗೂ ನಮೋನಮಃ (ಪ್ರಾರ್ಥನೆ)

ಮಹತ್ತತ್ವ ನಿಯಾಮಕರಾಗಿ ನಿಂತ ಬ್ರಹ್ಮ ವಾಯು ಸರಸ್ವತಿ ಯರಿಗೆ ಅಲ್ಲಿರುವ ಭಗವದ್ರೂಪಗಳಿಗೆ ಅನಂತ ನಮಸ್ಕಾರಗಳು.

ಅಹಂಕರ ತತ್ವ ನಿಯಾಮಕರಾಗಿ ರುದ್ರ ಗರುಡ ಶೇಷ ಅಂತರ್ಯಾಮಿ ಭಗವದ್ರೂಪಗಳಿಗೆ ನಮೋನಮಃ

ಬುದ್ದಿ ತತ್ವಾಭಿಮಾನಿಗಳಾದ ಉಮಾ ವಾರುಣಿ ಸೌಪರ್ಣಿಯರಲ್ಲಿ ನಿಂತ ಬಗವದ್ರೂಪಗಳಿಗೂ ನಮೋನಮಃ

ಮನಸ್ ತತ್ವ ನಿಯಾಮಕರಾದ ಇಂದ್ರ ಕಾಮ ಅನಿರುದ್ಧರಿಗೆ ಅವರೊಳಗಿರುವ ಭಗವದ್ರೂಪಗಳಿಗೆ ನಮೋನಮಃ

ಜ್ಞಾನೇಂದ್ರಿಯಗಳಿಗೆಲ್ಲ ನಿಯಾಮಕಳಾದ ಉಮಾದೇವಿಗೂ ಅವರಂತರ್ಗತ ಭಗವದ್ರೂಪಕ್ಕೆ ನಮೋನಮಃ

ಕರ್ಮೇಂದ್ರಿಯ ಸಮೂಹಕ್ಕೆ ನಿಯಾಮಕರಾದ ಅಹಂಕಾರಿಕ ಪ್ರಾಣದೇವರಿಗೆ ಅವರೊಳಗಿರುವ ಭಗವದ್ರೂಪಕ್ಕೆ ನಮೋನಮಃ

ಮನಸ್ಸೆಂಬ ಇಂದ್ರಿಯ ನಿಯಾಮಕರಾದ ಬ್ರಹ್ಮ ವಾಯು ಗರುಡ ಶೇಷ ರುದ್ರ ಚಂದ್ರ ವರುಣರಿಗೆ ಅವರೊಳಗಿರುವ ಭಗವದ್ರೂಪಕ್ಕೆ ನಮೋನಮಃ

ಶ್ರೋತ್ರೇಂದ್ರಿಯದೊಳಗಿರುವ ನಿಯಾಮಕರಾದ ಚಂದ್ರ, ವರುಣ, ಮಿತ್ರ, ಯಮ, ಕುಬೇರರಿಗೂ ಅವರೊಳಗಿರುವ ಭಗವದ್ರುಪಗಳಿಗೆ ನಮೋನಮಃ

ಚಕ್ಷುಸ್ ಅಭಿಮಾನಿ ಸೂರ್ಯನ ಅಂತರ್ಗತ ಭಗವದ್ರೂಪಕ್ಕೆ ನಮೋನಮಃ

ರಸನೇಂದ್ರಿಯ ನಿಯಾಮಕರಾದ ವರುಣದೇವರಿಗೆ ಅಲ್ಲಿರುವ ಭಗವದ್ರೂಪಕ್ಕೆ ನಮೋನಮಃ

ತ್ವಗಿಂದ್ರಿಯದಲ್ಲಿ ಅಭಿಮಾನಿಗಳಾದ ವಾಯುಸುತನಾದ ಮರುತ್ ಒಳಗಿರುವ ಭಗವದ್ರೂಪಕ್ಕೆ ನಮೋನಮಃ

ಘ್ರಾಣೇಂದ್ರಿಯಗಳಲ್ಲಿ ಅಭಿಮಾನಿಗಳಾದ ಅಶ್ವಿನಿದೇವತೆಗಳಿಗೂ ನಿಯಾಮಕ ಭಗವದ್ರೂಪಕ್ಕೆ ನಮೋನಮಃ

ವಾಗಾಭಿಮಾನಿಗಳಾದ ಅಗ್ನಿದೇವರಿಗೂ ಅವರಂತರ್ಗತ ಭಗವದ್ರೂಪಕ್ಕೆ ನಮೋನಮಃ

ಹಸ್ತೇಂದ್ರಿಯಕ್ಕೆ ಅಭಿಮಾನಿಗಳಾದ ವಾಯುಸುತ ಮರುತ್ ದಕ್ಷಪ್ರಜಾಪತಿಗಳಿಗೂ ಅವರಂತರ್ಗತ ಭಗವದ್ರೂಪಕ್ಕೆ ನಮೋನಮಃ

ಪಾದೇಂದ್ರಿಯ ಅಭಿಮಾನಿಗಳಾದ ಜಯಂತನಿಗೂ , ಶಚೀದೇವಿಯ ಮಕ್ಕಳಾದ ಯಜ್ಞ ಮತ್ತು ಶಂಬು ಇವರಿಬ್ಬರಿಗೆ, ಅಲ್ಲಲ್ಲಿ ನಿಂತ ಭಗವದ್ರೂಪಕ್ಕೆ ನಮೋನಮ್ಃ

ಪಾಯು ಇಂದ್ರಿಯ ನಿಯಾಮಕರಾದ ಮಿತ್ರ ಯಮರಿಗೆ ಅವರೊಳಗೆ ನಿಂತಿರುವ ನಿಯಾಮಕ ಭಗವದ್ರೂಪಕ್ಕೆ ನಮೋನಮಃ

ಉಪಸ್ತೇಂದ್ರಿಯ ನಿಯಾಮಕರಾದ ರುದ್ರ ಹಾಗೂ ಸ್ವಾಯಂಭೂಮನುಗಳಿಗೆ ಅವರಂತರ್ಗತ ಭಗವದ್ರೂಪಕ್ಕೆ ನಮೋನಮಃ

ಆಕಾಶಾಭಿಮಾನಿಗಳಾದ ಗಣಪತಿಗೂ ಅವರಂತರ್ಗತ ಭಗವದ್ರೂಪಕ್ಕೆ ನಮೋನಮಃ

ವಾಯುವಿಗೆ ಅಭಿಮಾನಿಗಳಾದ ವಾಯುಸುತ ಮರೀಚಿಗೆ ಅಲ್ಲಿರುವ ಭಗವದ್ರೂಪಕ್ಕೆ ನಮೋನಮಃ

ಅಗ್ನಿಯಲ್ಲಿ ನಿಂತ ಪಾವಕನೆಂಬ ಅಗ್ನಿಗೆ ನಿಯಾಮಕ ಭಗವದ್ರೂಪಕ್ಕೆ ನಮೋನಮಃ

ನೀರಿನಲ್ಲಿ ಅಭಿಮಾನಿಯಾದ ವರುಣದೇವರಿಗೆ ಅಂತರ್ಗತ ಭಗವದ್ರೂಪಕ್ಕೆ ನಮೋನಮಃ

ಭೂಮಿಯಲ್ಲಿ ನಿಂತ ಅಭಿಮಾನಿಯಾದ ಧರಾದೇವಿಗೂ ಶನೈಶ್ಚರನಿಗೂ ಅಲ್ಲಲ್ಲಿರುವ ಭಗವದ್ರೂಪಕ್ಕೆ ನಮೋನಮಃ

ನೀವೆಲ್ಲರು ನನ್ನೊಳಗಿದ್ದುಕೊಂಡು ನನ್ನ ಸಾಧನೆ ಮಾಡಿಸುತ್ತಾ ಇದ್ದೀರೆಂಬ ಎಚ್ಚರ ಸದಾಕೊಟ್ಟು ಅನುಗ್ರಹಮಾಡಿ. ನಿಮ್ಮ ಕರುಣೆಯಿಲ್ಲದಿದ್ದರೆ ಭಗವಂತನ ಸತತ ಚಿಂತನೆ ಬರುವುದು ಅಸಾಧ್ಯ. ಪ್ರತಿಯೊಂದು ಕರ್ಮ ನಡೆಯುವಾಗ ನನ್ನ ಜೊತೆ ನೀವೆಲ್ಲಾ ಇದ್ದೀರೆಂಬ ಅನುಭವ ಸದಾ ಬರಲಿ. ನಿಮ್ಮ ವಿಸ್ಮೃತಿ ಎಂದೂ ಬಾರದಿರಲಿ. ನನ್ನಲ್ಲಿ ದೇವ ಹಾಗೂ ದೈತ್ಯರನ್ನು ಪ್ರವೇಶಮಾಡಿಸಿ ಅವರ ಮೂಲಕ ಕರ್ಮಗಳನ್ನು

ಮಾಡಿಸಿ ಒಳ್ಳೆ ಫಲಗಳನ್ನು ದೇವತೆಗಳಿಗೂ, ಕೆಟ್ಟ ಫಲಗಳನ್ನು ದೈತ್ಯರಿಗೂ ಉಣಿಸಿ ಎರಡೂ ಫಲಗಳನ್ನು ನನ್ನ ಉದ್ಧಾರಕ್ಕಾಗಿ ಸತತ ಅನುಭವ ಕೊಡುವಂಥ ಬಿಂಬಮೂರ್ತಿಗೆ ನಮೋನಮಃ. ಅನಂತರ ಆಯುರ್ಯಜ್ಞ ಪ್ರಕರಣವನ್ನು ಇಲ್ಲಿ ಚಿಂತನೆ ಮಾಡಬೇಕು.

॥ಶ್ರೀ ಕೃಷ್ಣಾರ್ಪಣಮಸ್ತು॥

## 06. ಅವಸ್ಥಾತ್ರಯ ಪ್ರಕರಣ

ಸ್ಥೂಲಶರೀರ ಕೊಟ್ಟು ನನ್ನ ಜೊತೆಗೇನೇ ದೇವದೈತ್ಯರನ್ನು ನನ್ನೊಳಗೆ ನಿಲ್ಲಿಸಿ ವ್ಯಾಪಾರಗಳನ್ನು ಮಾಡಿಸಲಿಕ್ಕಾಗಿ ಮೂರು ಅವಸ್ಥೆಗಳನ್ನು ನಿರ್ಮಾಣ ಮಾಡಿದ ವಿಶ್ವ, ತೈಜಸ ಹಾಗೂ ಪ್ರಾಜ್ಞರೂಪಾತ್ಮಕವಾದ ಬಿಂಬಮೂರ್ತಿಗೆ ನಮೋನಮಃ ಅವಸ್ಥಾತ್ರಯವನ್ನು ನಿರ್ಮಾಣ ಮಾಡಬೇಕೆಂಬ ಬಿಂಬಮೂರ್ತಿಯ ಇಚ್ಛೆಗೆ ನಮೋನಮಃ

ಆ ಇಚ್ಛೆಗನುಸರಿಸಿ ಮೂರು ಗುಣಗಳಿಂದ ಕೂಡಿದ ನನ್ನ ಬುದ್ಧಿಯೊಳಗೆ ಮೂರುಗುಣ ರೂಪಗಳಿಂದ ನಿಂತ ವಿಶ್ವ, ತೈಜಸ ಹಾಗೂ ಪ್ರಾಜ್ಞ ರೂಪಗಳಿಗೂ, ನನ್ನಲ್ಲಿ ಪ್ರಕಟಮಾಡಿದ ಬುದ್ದಿಯ (ಉದ್ಬೋದ) ಪ್ರೇರಣೆ ಅದರಲ್ಲಿರುವ ದೇವರ ಮೂರ್ತಿಗೆ ನಮೋನಮಃ

ನಂತರ ಬಿಂಬನ ಗುಣತ್ರಯದ ರೂಪಗಳಲ್ಲಿರುವ ವಿಶ್ವ, ತೈಜಸ ಹಾಗೂ ಪ್ರಾಜ್ಞರೂಪಗಳಿಗೂ, ಬ್ರಹ್ಮಾದಿ ದೇವತೆಗಳ ಮೂಲಕ ನನ್ನ ಸ್ಥೂಲ ಶರೀರದಲ್ಲಿ ಪ್ರವೇಶಮಾಡಿ, ಅಲ್ಲಿರುವ ಬುದ್ಧಿಯಲ್ಲಿರುವ ವಿಶ್ವಾದಿರೂಪಗಳಿಂದ ವಿಶ್ವದಿ ಮೂರ್ತಿಗಳು. ಬ್ರಹ್ಮದಿ ರೂಪಗಳಿಂದ ಬ್ರಹ್ಮಾದಿ ರೂಪಗಳು ಐಕ್ಯ ಆಗಿ ನನ್ನ ಬುದ್ಧಿಯನ್ನು ಪ್ರಚೋದನೆ ಮಾಡಿ, ನನಗೆ ಕೊಟ್ಟ ಮೂರು ಅವಸ್ಥೆಗಳ ಆಕಾರದ ಭಗವದ್ರೂಪಕ್ಕೆ ನಮೋನಮಃ

ಬಿಂಬನ ಬುದ್ಧಿಯಿಂದ ಹಿಡಿದು ನನ್ನ ಬುದ್ಧಿಯ ಪರ್ಯಂತ ಒಂದಾಲೋಚನೆ ಬರಲಿಕ್ಕೆ ಏನೆಲ್ಲಾ ದೇವರ ದೇವತೆಗಳ ಅನಾಂತರೂಪಗಳು ಹೊರಟುಬರುತ್ತಾಯಿವೆಯೋ ಆ ಎಲ್ಲಾ ರೂಪಗಳು ಕ್ಷಣಕ್ಷಣದಲ್ಲಿ ಬರುವ

ಪ್ರತಿಯೊಂದು ಆಲೋಚನೆಯಲ್ಲೂ ತಾವು ಪ್ರಕಟವಾಗಿ ನಿಂತ ನನ್ನ ಜೀವನವನ್ನು ನಡೆಸುತ್ತಿವೆ. ಅಂತಹ ದೇವರ ದೇವತೆಗಳ ಅನಂತ ರೂಪಗಳಿಗೆ ನಮೋನಮಃ ಮೂರು ಅವಸ್ಥೆಗಳಲ್ಲಿ ಪ್ರಕಟವಾಗಿ ನನ್ನನ್ನು ಎಡಬಿಡದೆ ಕಾಯುವ ಇಂತಹ ದೇವರ ದೇವತೆಗಳ ರೂಪಗಳಿಗೆ ಸದಾ ನಮಸ್ಕಾರಗಳು. ಈ ನೆನಪು ತತ್ವಾಭಿಮಾನಿಗಳ ಮೂಲಕ ಸದಾ ಕೊಡು ಹರಿಯೇ. ಏನೆಲ್ಲಾ ಆಲೋಚನೆಗಳ ರೂಪಗಳ ಚಿಂತನೆ, ಆಯಾ ಕಾಲದಲ್ಲಿ, ನನ್ನ ಕರ್ಮಾನುಸಾರ ಬರದೇಯಿದ್ದಲ್ಲಿ ಅನಂತರದಲ್ಲಿ ಜ್ಞಾನ ಬಂದಾಗ, ನೀನು ಜ್ಞಾನ ಕೊಟ್ಟಾಗ ನಿನಗರ್ಪಿಸುವಂತೆ ಮಾಡು ಹರಿಯೇ!
ಮೂರು ಅವಸ್ಥೆಗಳಲ್ಲೂ ಸ್ವತಂತ್ರವಾಗಿ ನೀನಿಲ್ಲದೆ ನಾನಿರಲಾರೆ, ನಿನಗೆ ಯಾವ ಪ್ರಯೋಜನವಿಲ್ಲದಿದ್ದಾರೂ ಮೂರು ಅವಸ್ಥೆಗಳಿಂದ ಕೂಡಿದ 24 ಗಂಟೆಗಳ ಕಾಲ ನನ್ನನ್ನು ನನ್ನ ಕರ್ಮಾನುಸಾರ ಬೇಕಾದ್ದನ್ನೆಲ್ಲಾ ಕೊಟ್ಟು ತಾಯಿಯಂತೆ ಎಡಬಿಡದೆ ಸಲಹುವ, ನನಗಾಗಿ ಹೆಣಗುವ ನಿನ್ನ ದಯೆ ನನಗೆ ಸದಾ ನೆನಪಿರುವಂತೆ ಮಾಡು.

॥ಶ್ರೀಕೃಷ್ಣಾರ್ಪಣಮಸ್ತು॥

## 07. ಪ್ರಾಣವ್ಯಾಪಾರ ಪ್ರಕರಣ

ನನ್ನೊಳಗೆ, ವಿಶ್ವನಾಮಕ ಭಗವಂತನಿಂದ ಅಭಿನ್ನನಾದ, ಪ್ರಾಣ,ಅಪಾನ,ವ್ಯಾನ,ಉದಾನ,ಸಮಾನ ಎಂಬ ಐದು ರೂಪಗಳಿಂದ ವಾಯುದೇವರ ಪ್ರಾಣಾದಿ ಐದು ರೂಪಗಳಲ್ಲಿ ನಿಂತು, ಪ್ರಾಣದೇವರ ಮೂಲಕ ನನ್ನ ಸರ್ವ ವ್ಯಾಪಾರಗಳನ್ನೂ ಮಾಡಿಸುವಂಥ ಬಿಂಬಮೂರ್ತಿಗೆ ನಮೋನಮಃ
ನನ್ನ ಮುಖ ನಾಸಿಕ, ಶ್ರೋತ್ರಗಳೆಂಬ ಮೂರು ಸ್ಥಾನಗಳಲ್ಲಿ, ದಾಸಪ್ರಾಣರಲ್ಲಿ ,ಶೇಷದೇವರೊಳಗೆ ನಿಂತ, ಪ್ರಾಣನಾಮಕ ಮುಖ್ಯಪ್ರಾಣನಲ್ಲಿ ನಿಂತ, ಪ್ರಾಣನೆಂದು ಹೆಸರಿಟ್ಟುಕೊಂಡ ನಾರಾಯಣ ರೂಪ ಮಾಡಿಸುವ ಶ್ವಾಸಕಾರ್ಯಕ್ಕೂ ಆಯಾ ಭಗವದ್ರೂಪಗಳಿಗೂ, ಪ್ರಾಣಾದಿ ರೂಪಗಳಿಗೂ ನಮೋನಮಃ

ಪ್ರಾಣನಾಮಕ ಭಗವಂತನು ಹೊರಗೆ ಬರುತ್ತಾ "ಸ"ಕಾರವನ್ನು ಪ್ರಕಟಿಸುತ್ತಾನೆ. ಆ ಸ ಕಾರದೊಳಗಿರುವ ಭಗವದ್ರೂಪಕ್ಕೆ ನಮೋನಮಃ

ಒಳಗೆ ಪ್ರವೇಶ ಮಾಡುತ್ತಾ "ಹ"ಕಾರವನ್ನು ಪ್ರಕಟಮಾಡುತ್ತಾನೆ. ಆ ಹ ಕಾರಗತ ಭಗವದ್ರೂಪಕ್ಕೆ ನಮೋನಮಃ

ಹೋಗಿಬರುವ ಭರದಿಂದ "ಹಂಸ" ಎಂದು ಪ್ರಕಟವಾಗುತ್ತದೆ, ಅಲ್ಲಿರುವ ಭಗವದ್ರೂಪಕ್ಕೆ ನಮೋನಮಃ

ನನ್ನೊಳಗೆ ಹಂಸರೂಪದಿಂದ ನಿಂತ ಭಗವಂತನಿಗೆ ನಮೋನಮಃ

ಭಗವಂತನು ಹಂಸನಾಮಕನು, ನಾನು ಅವನ ಪ್ರತಿಬಿಂಬ ಎಂದು

ಉಪಸ್ಥೇಂದ್ರಿಯಗಳಲ್ಲಿರುವ ಅಪಾನನಾಮಕ ಜಡವಾಯುವಿನೊಳಗಿರುವ ಅಪಾನನಾಮಕ ದಾಸಪ್ರಾಣನಲ್ಲಿರುವ,ಅಪಾನನಾಮಕ ಗರುಡನಲ್ಲಿರುವ ಅಪಾನನಾಮಕ ಮುಖ್ಯಪ್ರಾಣನಲ್ಲಿರುವ, ಅಪಾನನಾಮಕ ವಾಸುದೇವರೂಪಕ್ಕೆ ನಮೋನಮಃ

ಉಂಡ ಅನ್ನವನ್ನು ವಿಭಾಗ ಮಾಡಿ ಪಚನ ಮಾಡುವ ಸಮಾನನಾಮಕ ಜಡವಾಯುವಿನಲ್ಲಿರುವ, ಸಮಾನನಾಮಕ ದಾಸಪ್ರಾಣನಲ್ಲಿರುವ, ಸಮಾನನಾಮಕ ಇಂದ್ರದೇವರಲ್ಲಿರುವ, ಸಮಾನನಾಮಕ ಮುಖ್ಯಪ್ರಾಣನಲ್ಲಿರುವ, ಸಮಾನನಾಮಕ ಅನಿರುದ್ಧ ರೂಪಕ್ಕೆ ನಮೋನಮಃ

ನಾಭಿಪ್ರದೇಶದಲ್ಲಿದ್ದು ವ್ಯಾಪಾರ ಮಾಡುವವನೇ ಸಮಾನ, ನನ್ನ ಶರೀರದೊಳಗೆ 72,000 ನಾಡಿಗಳಲ್ಲಿ ನಿಂತು ಶರೀರ ಹಾಳಾಗದಂತೆ ತಿರುಗಾಡುತ್ತಾ ನಾನಾ ಕಠಿಣಕರ್ಮಗಳನ್ನು ಮಾಡಿಸುವ ವ್ಯಾನನಾಮಕ ಜಡವಾಯುವಿನೊಳಗಿರುವ, ವ್ಯಾನನಾಮಕ ದಾಸಪ್ರಾನನೊಳಗಿರುವ, ವ್ಯಾನನಾಮಕ ಮುಖ್ಯಪ್ರಾಣನೊಳಗಿರುವ ವ್ಯಾನನಾಮಕ ಸಂಕರ್ಷಣ ರೂಪಕ್ಕೆ ನಮೋನಮಃ

ನನ್ನೊಳಗಿರುವ ಸುಷುಮ್ನಾನಾಡಿಯಲ್ಲಿ ನಿಂತಿರುವ, ನಾಡಿ ಮೂಲಕ ಜೀವರನ್ನು ಮೇಲಕ್ಕೆ ಕರೆದುಕೊಂಡು ಹೋಗುವ, ಉದಾನನಾಮಕ ಜಡವಾಯುವಿನೊಳಗಿರುವ, ಉದಾನನಾಮಕ ರುದ್ರದೇವರಲ್ಲಿರುವ, ಉದಾನನಾಮಕ ಮುಖ್ಯಪ್ರಾಣನೊಳಗಿರುವ, ಉದಾನನಾಮಕ ಪ್ರದ್ಯುಮ್ನನಿಗೆ ನಮೋನಮಃ

ಪ್ರಾಣಾಂತರ್ಗತ ನಾರಾಯಣ ! ನೀನು ದಯದಿಂದ ನಿನ್ನ ಸ್ವಾತಂತ್ರದ ನೆನಪಿನಿಂದ ಕೂಡಿದ ಸಕಲ ಕರ್ಮಗಳನ್ನು ನಿನ್ನ ಪೂಜೆಯೆಂಬ ಭಾವನೆ ಕೊಟ್ಟು ಮಾಡಿಸು.

ಹೇ! ವ್ಯಾನಂತರ್ಗತ ಸಂಕರ್ಷಣ ಸಾಧನೆಯ ಪ್ರತಿಬಂಧಕಗಳನ್ನು ದಯವಿಟ್ಟು ತೆಗೆದುಬಿಡು. ಉದಾನಾಂತರ್ಗತ ಪ್ರದ್ಯುಮ್ನ ನನ್ನಿಂದ ನಿನ್ನ ಪ್ರೀತಿಕರವಾದ ಯೋಗಕರ್ಮಗಳನ್ನು ದಯದಿಂದ ಮಾಡಿಸು.
ಹೇ!ಅಪಾನಂತರ್ಗತ ವಾಸುದೇವ, ನಿನಗೆ ಪ್ರಿಯವಲ್ಲದ ಅನ್ಯ ಕರ್ಮಗಳನ್ನು ಬಿಡಿಸು. ಸಮಾನಾಂತರ್ಗತ ಅನಿರುದ್ಧ, ದಯದಿಂದ ನನ್ನ ದೇಹ, ಇಂದ್ರಿಯ, ಮನಸ್ಸುಗಳನ್ನು ನಿನ್ನ ಕಡೆಯೇ ಪ್ರೇರಿಸು.
ನನ್ನ ಶರೀರದಲ್ಲಿ ಪ್ರಾಣದೇವರನ್ನೇ ಆಶ್ರಯವಾಗಿಟ್ಟುಕೊಂಡು, ರಮಾದೇವಿಯನ್ನೇ ಪ್ರತಿಮೆಯನ್ನಾಗಿ ಮಾಡಿ ನನಗೆ ಸದಾ ಪ್ರಿಯವನ್ನೇ ಮಾಡುವುದರಿಂದ "ಪ್ರಿಯ" ಎಂಬ ರಹಸ್ಯನಾಮ ಹೊತ್ತಿರುವ ಹೆ! ಬಿಂಬ ಮೂರ್ತಿಯೇ ನಿನ್ನ ಚಿಂತನೆ ಸದಾಬರಲಿ.

॥ಶ್ರೀಕೃಷ್ಣಾರ್ಪಣಮಸ್ತು॥

## 08. ಭೋಜನ ಪ್ರಕರಣ

ಭೋಜನ ಕಾಲದ ಪದಾರ್ಥಗಳಲ್ಲಿ ಸರ್ವತ್ರ ನಿಂತಿರುವ ಬ್ರಹ್ಮಾದಿ ಪುಷ್ಕರಾಂತ ದೇವತೆಗಳಿಗೆ, ಅವರೊಳಗೆ ನಿಂತಿರುವ ಅನಿರುದ್ಧ ನಾರಾಯಣರಿಗೆ ನಮೋನಮಃ
ಅನ್ನದೊಳಗಿರುವ ಸೋಮಾಂತರ್ಗತ ಕೇಶವನಿಗೆ ನಮೋನಮಃ
ಭಕ್ಷ್ಯಗಳಲ್ಲಿರುವ ಸೂರ್ಯಾಂತರ್ಗತ ಮಾಧವನಿಗೆ ನಮೋನಮಃ
ಪರಮಾನ್ನದಲ್ಲಿರುವ ಭಾರತಿ ಅಂತರ್ಗತ ನಾರಾಯಣನಿಗೆ ನಮೋನಮಃ
ಘೃತದೊಳಗಿರುವ ಲಕ್ಷ್ಮೀಪತಿಯಾದ ಗೋವಿಂದನಿಗೆ ನಮೋನಮಃ
ಕ್ಷೀರದೊಳಗಿರುವ ಸರಸ್ವತಿ ಅಂತರ್ಗತ ವಿಷ್ಣುವಿಗೆ ನಮೋನಮಃ
ಮಂಡಿಗೆಯಲ್ಲಿಪ್ಪ ಚತುರ್ಮುಖಾಂತರ್ಗತ ಮಧುಸೂದನನಿಗೆ ನಮೋನಮಃ
ದಧಿಯಲ್ಲಿ ಸೋಮ ವರುಣಾಂತರ್ಗತ ವಾಮನನಿಗೆ ನಮೋನಮಃ
ಸೂಪದೊಳಗಿರುವ ಗರುಡಾಂತರ್ಗತ ಶ್ರೀಧರನಿಗೆ ನಮೋನಮಃ
ಪತ್ರಶಾಖಗಳಲ್ಲಿ ಶೇಷಾಂತರ್ಗತ ಪದ್ಮನಾಭನಿಗೆ ನಮೋನಮಃ
ಆಮ್ಲ ಪದಾರ್ಥಗಳಲ್ಲಿ ನಿಂತ ಪಾರ್ವತಿ ಅಂತರ್ಗತ ದಾಮೋದರನಿಗೆ ನಮೋನಮಃ

ಅನಾಮ್ಲ ಪದಾರ್ಥಗಳಲ್ಲಿರುವ ರುದ್ರಾಂತರ್ಗತ ಸಂಕರ್ಷಣನಿಗೆ ನಮೋನಮಃ
ಬೆಲ್ಲಸಕ್ಕರೆ ಮೊದಲಾದ ಮಧುರ ದ್ರವ್ಯಗಳಲ್ಲಿರುವ ಇಂದ್ರಾಂತರ್ಗತ ವಾಸುದೇವನಿಗೆ ನಮೋನಮಃ
ಖಾರಪದಾರ್ಥಗಳಲ್ಲಿರುವ ಯಮಾಂತರ್ಗತ ಅನಿರುದ್ಧನಿಗೆ ನಮೋನಮಃ
ಕರ್ಪೂರ ಕೇಸರಿ ಮೊದಲಾದ ಪದಾರ್ಥಗಳಲ್ಲಿರುವ ಲಕ್ಷ್ಮೀಪತಿಯಾದ ಪುರುಷೋತ್ತಮನಿಗೆ ನಮೋನಮಃ
ಚೋಷ್ಯ, ಪೇಯ, ಲೇಹ್ಯ, ಖಾದ್ಯ ಮೊದಲಾದ ಪಕ್ವಾನ್ನದಲ್ಲಿರುವ ಬುಧಾಂತರ್ಗತ ಅಧೋಕ್ಷಜನಿಗೆ ನಮೋನಮಃ
ಎಳ್ಳು, ಕುಂಬಳಕಾಯಿ, ಉದ್ದು ಇವುಗಳಿಂದ ಕೂಡಿರುವ ಭಕ್ಷಗಳಲ್ಲಿ ದಕ್ಷಾಂತರ್ಗತ ನಾರಸಿಂಹನಿಗೆ ನಮೋನಮಃ
ಮಾಷ (ಉದ್ದು) ಭಕ್ಷದಲ್ಲಿರುವ ಸ್ವಾಯಂಭುವ ಮನು ಅಂತರ್ಗತ ಅಚ್ಯುತನಿಗೆ ನಮೊನಮಃ
ಲವಣದಲ್ಲಿರುವ ನಿಋತಿ ಅಂತರ್ಗತ ಜನಾರ್ದನನಿಗೆ ನಮೋನಮಃ
ತಾಂಬೂಲದಲ್ಲಿರುವ ಗಂಗೆಯ ಒಳಗಿರುವ ಶ್ರೀಹರಿಗೆ ನಮೋನಮಃ
ಸ್ವಾದೋದಕದಲ್ಲಿರುವ ಬುಧಾಂತರ್ಗತ ಶ್ರೀಕೃಷ್ಣನಿಗೆ ನಮೋನಮಃ
ಎಲ್ಲಾ ಶುದ್ಧ ದ್ರವ್ಯಗಳಲ್ಲಿರುವ ಪುಷ್ಕರಾಂತರ್ಗತ ಹಂಸನಾಮಕನಿಗೆ ನಮೋನಮಃ
ಒಲೆಗಳಲ್ಲಿ ಅಗ್ನಿ ಅಂತರ್ಗತ ಪರಶುರಾಮನಿಗೆ ನಮೋನಮಃ
ಕಟ್ಟಿಗೆ,ಕುರುಳು,ಇಜ್ಜಲುಗಳಲ್ಲಿರುವ ವಸಂತಾಂತರ್ಗತ ಸಂಕರ್ಷಣನಿಗೆ ನಮೋನಮಃ
ಪಾಕಕರ್ತೃಗಳಲ್ಲಿ ನಿಂತಿರುವ ಭೀಮಾಂತರ್ಗತ ಶ್ರೀದೇವಿಯಲ್ಲಿ ನಿಂತಿರುವ ವಿಶ್ವಂಭರನಿಗೆ ನಮೋನಮಃ
ಅಡಿಗೆ ಪಾತ್ರೆಗಳಲ್ಲಿರುವ ವಾರುಣಿಯಲ್ಲಿ ನಿಂತ ಆನಂದನಾಮಕ ಭಗವಂತನಿಗೆ ನಮೋನಮಃ
ಭೋಜನ ಪಾತ್ರೆಯಲ್ಲಿ ದುರ್ಗಾಂತರ್ಗತ ಸತ್ಯನಾಮಕ ಭಗವಂತನಿಗೆ ನಮೋನಮಃ
ಭೋಜನಪಾತ್ರೆಯ ಕೆಳಗಿನ ಮಂಡಲದಲ್ಲಿರುವ ಭೂಮಿ ಅಂತರ್ಗತ ವರಾಹನಿಗೆ ನಮೋನಮಃ

ಭೋಜನ ಒಳಗೆ ಹೋಗಲು ಅವಕಾಶ ಕೊಡುವ ವಾಸುದೇವನಿಗೆ ನಮೋನಮಃ
ಹನ್ನೊಂದು ಅಂಗಗಳಿಂದ ನನ್ನೊಳಗೆ ನಿಂತ ವೈಶ್ವಾನರಮೂರ್ತಿಗೆ ನಮೋನಮಃ
ನನ್ನ ಶರೀರದಲ್ಲಿ ವೈಶ್ವಾನರ ಅಗ್ನಿಯನ್ನು ಉದ್ಧೀಪನ ಮಾಡುವ ಪ್ರಾಣ ಅಪಾನಾಂತರ್ಗತ ನಾರಾಯಣ ವಾಸುದೇವರೂಪಗಳಿಗೂ ನಾಲ್ಕು ರೀತಿಯಾದ ಅನ್ನವನ್ನು ಪಚನವನ್ನು ಮಾಡುವ ವೈಶ್ವಾನರಮೂರ್ತಿಗೆ ನಮೋನಮಃ
ಪಚನವನ್ನು ಮಾಡಿದ ಅನ್ನವನ್ನು ಮೂರು ಭಾಗಮಾಡಿ, ಸ್ಥೂಲಭಾಗವನ್ನು ಪುರೀಷಾದಿಗಳಿಗಾಗಿ ಇಟ್ಟು, ಮಧ್ಯಭಾಗವನ್ನು ಮತ್ತು ಅಣುತಮ ಭಾಗವನ್ನೂ ತೆಗೆದುಕೊಂಡು ಧಾರಣೆ, ಪೋಷಣೆ, ಚೇಷ್ಟಾ ಮೊದಲಾದ ಶರೀರ ವ್ಯಾಪಾರ ನಿರ್ವಹಣೆ ಮಾಡಲಿಕ್ಕಾಗಿ ಅಣುಅಣುವಿನಲ್ಲಿ ನಿಂತ ಬ್ರಹ್ಮಾದಿ ಪುಷ್ಕರಾಂತ ದೇವತೆಗಳಿಗೂ ಎಲ್ಲರಲ್ಲಿ ನಿಂತ ಭಗವದ್ರೂಪಗಳಿಗೂ, ಅಲ್ಲಲ್ಲಿಗೆ ಹೋಗಿ ಅವರವರ ರೂಪಗಳನ್ನು ಅವರವರಿಗೆ ಸೇರಿಸುವ ಸಮಾನಾಂತರ್ಗತ ಅನಿರುದ್ಧನಿಗೆ ನಮೋನಮಃ
ಭೋಜನಕ್ಕೆ ಮೊದಲು ಸ್ವೀಕರಮಾಡುವ ಮಂತ್ರಪೂತವಾದ ನೀರು ಮುಖ್ಯಪ್ರಾಣಾದೇವರಿಗೆ ಸಮರ್ಪಣೆಗಾಗಿ ಕೆಳಗೆ ಹಾಕುವ ವಸ್ತ್ರವಾಗಲಿ ಅಲ್ಲಿರುವ ಭಗವದ್ರೂಪಗಳಿಗೆ ನಮೋನಮಃ
ನಾನು ಉಣ್ಣುವ ಅನ್ನ ದೇವತೆಗಳು ಪ್ರಾಣದೇವರಿಗೆ ಕೊಡುವ ಕಪ್ಪವಾಗಿದೆ, ಅಲ್ಲಿರುವ ಭಗವದ್ರೂಪಗಳಿಗೆ ನಮೋನಮಃ
ಭೋಜನದ ಅಂತ್ಯದಲ್ಲಿ ಸ್ವೀಕರಿಸುವ ಮಂತ್ರಪೂತ ಜಲವು ಪ್ರಾಣದೇವರ ಅನ್ನಕ್ಕೆ ಮೇಲೆ ಮುಚ್ಚುವ ವಸ್ತ್ರವಾಗಲಿ, ಅಲ್ಲಿರುವ ಭಗವದ್ರೂಪಕ್ಕೆ ನಮೋನಮಃ
ನನ್ನ ಹೃದಯದಲ್ಲಿ ಕರ್ಣಿಕಾಮೂಲದಲ್ಲಿ ಅಂಗುಷ್ಠಾಗ್ರದ ಅಳತೆಯಿಂದ ಇರುವ ಮೂಲೇಶನಿಗೆ ನಮೋನಮಃ
ಹೃದಯಕರ್ಣಿಕಾ ಅಗ್ರದಲ್ಲಿ ಅಂಗುಷ್ಠಮಾತ್ರ ಪರಿಮಾಣದಲ್ಲಿ ನಿಂತಿರುವ ಸುಷುಮ್ನಾದಲ್ಲಿ ನನಗಾಧಾರವಾದ ಅಗ್ರೇಶನಿಗೆ ನಮೋನಮಃ
ಹೃದಯಕಮಲದ ಆಕಾರವಾಗಿ ಚೋಟುದ್ದ ಪರಿಮಾಣದಲ್ಲಿ ನಿಂತಿರುವ ನನಗೆ ಸದಾ ಆಧಾರವಾದ ಪ್ರಾದೇಶನಾಮಕ ಭಗವಂತನಿಗೆ ನಮೋನಮಃ

ನಾನು ಉಂಡ ಅನ್ನದ ಸಾರವನ್ನು ನಾಡಿಗಳ ಮೂಲಕ ಲಕ್ಷ್ಮೀದೇವಿ ಸಹಿತವಾಗಿ ಸ್ವೀಕಾರ ಮಾಡುವ ವಿರಾಟರೂಪಕ್ಕೆ ನಮೋನಮಃ

ಹೃದಯದಲ್ಲಿರುವ ಮೂರು ರೂಪಗಳಿಗೂ ಹೃದಯವೇ ಆಶ್ರಯವಾಗಿದೆ, ರಮಾದೇವಿಯೇ ಪ್ರತಿಮೆಯಾಗಿದ್ದಾಳೆ. ನನಗೆ (ಜೀವನಿಗೆ) ಸದಾ ಸ್ಥಿತಿಯನ್ನು ಕೋಡುವುದರಿಂದ "ಸ್ಥಿತಿ" ಎಂಬ ರಹಸ್ಯನಾಮ ಹೊತ್ತ ಬಿಂಬಮೂರ್ತಿಗೆ ನಮೋನಮಃ

ಬಿಂಬಮೂರ್ತಿಗೆ ಹೃದಯವೇ ಆಶ್ರಯ, ರಮಾದೇವಿಯೇ ಮುಖ್ಯಪ್ರತಿಮಾ, ಸಂಸಾರವೆಂಬ, ಲಿಂಗದೇಹವೆಂಬ ಅನಿಷ್ಟವನ್ನು ನಿವೃತ್ತಿ ಮಾಡುವುದರಿಂದ "ಹರಿ" ಎಂಬ ರಹಸ್ಯನಾಮ ಹೊತ್ತ ಬಿಂಬಮೂರ್ತಿಗೆ ನಮೋನಮಃ

ಅದ್ಭುತವಾದ ಶ್ವೇತದ್ವೀಪವೆಂಬ ಸ್ಥಾನವನ್ನು, ಅಮೃತ ಸುರಿಯುವ ಅಶ್ವತ್ಥವನ್ನು, ವಿಸ್ಥಾರವಾದ ಶೇಷ ಮಂಚವನ್ನು ಅಲೌಕೀಕವಾದ ತನ್ನದೇ ಆದ ರೂಪಗಳಿಂದ ಶೋಭಿಸುವ ನಾನಾ ಭೋಗಗಳನ್ನು ಬಿಟ್ಟು ನನ್ನ ಈ ಶರೀರವೆಂಬ ನವದ್ವಾರಗಳಿಂದ ಮಲಸುರಿಯುವ, ಚಿಕ್ಕ ಹೃದಯಕಮಲವೆಂಬ ಮಂಚದಲ್ಲಿ ಮಲಗಿರುವ, ಭಕ್ತಿಯೆ ಇಲ್ಲದೆ ನಾನು ಮಾಡುವ ಪೂಜೆಯನ್ನು ದಯದಿಂದ ಸ್ವೀಕರಿಸುವ ಬಿಂಬಮೂರ್ತಿಗೆ ಅನಂತ ನಮಸ್ಕಾರಗಳು.

॥ಶ್ರೀಕೃಷ್ಣಾರ್ಪಣಮಸ್ತು॥

## 09. ಇಂದ್ರಿಯ ವ್ಯಾಪಾರ ಪ್ರಕರಣ

ನನ್ನ ಮನಸ್ಸಿನಲ್ಲಿ ಅನಿರುದ್ಧನಾಮಕನಾಗಿ ಅನೇಕ ಆಲೋಚನೆಗಳನ್ನು ಕೊಡುವುದರ ಮೂಲಕ ಸಾಧನೆ ಮಾಡಿಸುತ್ತಿರುವ ಬಿಂಬಮೂರ್ತಿಯ ಮನೋನಾಮಕ ಅನಿರುದ್ಧ ರೂಪಕ್ಕೆ ನಮೋನಮಃ

24ತತ್ವಾಭಿಮಾನಿಗಳ ಹೆಸರು ಆಯಾ ಆಕಾರಗಳಿಂದ ಇರುವ ಬಿಂಬ ಮನಸ್ಸಿನ ಅನಿರುದ್ಧ ರೂಪದ ಜೊತೆಗಿರುವ ಭಗವಂತನ 24 ರೂಪಗಳಿಗೆ ನಮೋನಮಃ

ನನ್ನ ಸ್ವರೂಪದೇಹದ ಮನಸ್ಸಿಗೆ ನಿಯಾಮಕನಾಗಿ ನಿಂತಿರುವ ಅನಿರುದ್ಧರೂಪಕ್ಕೂ, ಭಗವಂತನ 24 ರೂಪಗಳಿಗೂ, ವಾಯುದೇವರ 24ರೂಪಗಳಿಗೂ ನಮೋನಮಃ

ನನ್ನ ಲಿಂಗದೇಹದ ಮನಸ್ಸಿನಲ್ಲಿರುವ ಬ್ರಹ್ಮ ವಾಯು ಸರಸ್ವತಿ ಭಾರತಿಯರ ಪ್ರತ್ಯೇಕ ಪ್ರತ್ಯೇಕ 24ರೂಪಗಳಿಗೂ, ಅವರವ ಒಳಗಿರುವ ಭಗವದ್ರೂಪಗಳು ಅಲ್ಲದೇ ಪ್ರತ್ಯೇಕ ಪ್ರತ್ಯೇಕ 24ರೂಪಗಳಿಗೂ, ಆಲ್ಲೆಲ್ಲಾಕಡೆ ನಿಂತಿರುವ ಭಗವದ್ರೂಪಗಳಿಗೂ, ಅದಲ್ಲದೆ ಪ್ರತ್ಯೇಕ ಪ್ರತ್ಯೇಕ 24ರೂಪಗಳ ಜೊತೆ ನನ್ನ ನಿಂತಿರುವ ಅನಿರುದ್ಧ ರೂಪಕ್ಕೆ ನಮೋನಮಃ

ನನ್ನ ಸ್ಥೂಲದೇಹದ ಮನಸ್ಸಿನಲ್ಲಿರುವ 24ತತ್ತ್ವಾಭಿಮಾನಿಗಳ ರೂಪಕ್ಕೂ, ಅವನಲ್ಲಿ ನಿಂತಿರುವ ಬ್ರಹ್ಮ ವಾಯು ಸರಸ್ವತಿ ಭಾರತಿಯರ ಪ್ರತ್ಯೇಕ ಪ್ರತ್ಯೇಕ ರೂಪಗಳಿಗೂ ಅಲ್ಲಲ್ಲಿ ನಿಂತಿರುವ ಭಗವದ್ರೂಪಗಳಿಗೂ, ತನ್ನದೇ ಆದ 24ರೂಪಗಳಿಂದ ಶೋಭಿಸುವ ಅನಿರುದ್ಧ ರೂಪಕ್ಕೆ ನಮೋನಮಃ

ಒಂದಾಲೋಚನೆ ಕೊಡುವುದಕ್ಕಾಗಿ ಬಿಂಬನ ಮನಸ್ಸಿನ ಸ್ಥಾನದಲ್ಲಿರುವ ಅನಿರುದ್ಧ ಹಾಗೂ 24ರೂಪಗಳಿಂದ ಪ್ರಕಟವಾದ ಅಂಥದ್ದೇ ರೂಪಗಳಿಂದ, ಸ್ವರೂಪ,ಲಿಂಗ,ಅನಿರುದ್ಧ ದೇಹಗಳ ಮನಸ್ಸಿನಲ್ಲಿರುವ, ದೇವರ ದೇವತೆಗಳ ರೂಪಗಳಿಂದ ಪ್ರಕಟವಾದ, ಸ್ಥೂಲದೇಹದಲ್ಲಿರುವ ಮನಸ್ಸಿನಲ್ಲಿರುವಾ, ತಮ್ಮ ತಮ್ಮ ರೂಪಗಳಿಂದ ಐಕ್ಯವಾದ ದೇವರ ದೇವತೆಗಳ, ಪ್ರಕತೀಭೂತವಾದ(ಹೊರಬ್ಂದಂತ) ಋಪಗಳಿಗೆ ನಮೋನಮಃ

ಬಿಂಬನ ಮನಸ್ಸಿನ ಸ್ಥಾನದಲ್ಲಿರುವ ಅನಿರುದ್ಧರೂಪ ಮತ್ತು 24ಭಗವದ್ರೂಪಗಳು ಅವುಗಳಿಂದ ಪ್ರಾದುರ್ಭೂತವಾದ 24ರೂಪಗಳ ಸಹಿತ ಅನಿರುದ್ಧರೂಪ, ಸ್ವರೂಪದೇಹದಲ್ಲಿರುವ ತನ್ನ ರೂಪಗಳಿಂದ ಐಕ್ಯವಾಗಿದೆ. ನನ್ನ ಮನಸ್ಸಿನಲ್ಲಿರುವ ಆ ರೂಪಗಳಿಗೆ ನಮೋನಮಃ

ಸ್ವರೂಪದೆಹದ ಮನಸ್ಸಿನಿಂದ ಪ್ರಕಟವದ ಭಗವಂತನ 24 ರೂಪಗಳ ಸಹಿತವಾದ ಅನಿರುದ್ಧರೂಪಕ್ಕೂ, ವಾಯುದೇವರ ಪ್ರಕಟವಾದ 24ರೂಪಗಳಲ್ಲಿ ನಿಂತಿರುವ ಭಗವದ್ರೂಪಗಳಿಗೂ ನಮೋನಮಃ

ಈ ರೂಪಗಳು ಲಿಂಗದೇಹದಲ್ಲಿರುವ ತಮ್ಮ ತಮ್ಮ ರೂಪಗಳಿಂದ ಐಕ್ಯಹೊಂದಿ ಅಲ್ಲಿಂದ ಪ್ರಕಟವಾಗಿ ಅನಿರುದ್ಧದೇಹದಲ್ಲಿರುವ ತಮ್ಮತಮ್ಮ ರೂಪಗಳಿಂದ ಐಕ್ಯ ಹೊಂದಲಿರುವ ಅನಿರುದ್ಧರೂಪ, ದೇವರ

24ರೂಪಗಳು,ಬ್ರಹ್ಮ,ವಾಯು,ಸರಸ್ವತಿ,ಭಾರತಿಯರ ಪ್ರತ್ಯೇಕ ಪ್ರತ್ಯೇಕ ರೂಪಗಳಿಗೂ ನಮೋನಮಃ

ಅನಿರುದ್ಧದೇಹದಿಂದ ಪ್ರಕಟವಾದ ಸ್ಥೂಲದೇಹದ ಮನಸ್ಸಿನಲ್ಲಿರುವ ತಮ್ಮ ತಮ್ಮ ರೂಪಳಿಂದ ಐಕ್ಯಹೊಂದಲಿರುವ ಅನಿರುದ್ಧರೂಪ, ದೇವರ 24ರೂಪಗಳು ಬ್ರಹ್ಮ, ವಾಯು, ಸರಸ್ವತಿ, ಭಾರತಿಯರ ಪ್ರತ್ಯೇಕ ಪ್ರತ್ಯೇಕ 24ರೂಪಗಳು, ತತ್ವಾಭಿಮಾನಿಗಳ ಪ್ರತ್ಯೇಕ ಪ್ರತ್ಯೇಕ ರೂಪಗಳು, ಅಲ್ಲಲ್ಲಿ ಎಲ್ಲಾ ಕಡೆ ನಿಂತಿರುವ ಅನಂತ ಭಗವದ್ರೂಪಗಳಿಗೆ ನಮೋನಮಃ

ಈ ರೂಪಗಳಿಗೆಲ್ಲಾ ಸ್ಥೂಲದೇಹದ ಮನಸ್ಸಿನಲ್ಲಿರುವ ತಮ್ಮ ತಮ್ಮ ರೂಪಗಳಿಂದ ಐಕ್ಯ ಆದಮೇಲೆ ಪ್ರಕಟವಾದ ಆಯಾ ಗುಂಪು ಗುಂಪಾದ ದೇವರ ದೇವತೆಗಳ ನಿಯಾಮಕ ರೂಪಗಳಿಗೂ ನಮೋನಮಃ

ನನ್ನ ಮನಸ್ಸಿನಲ್ಲಿರುವ ಅಹಂಕಾರ ಮಮಕಾರಗಳಿಗೆ ಪ್ರೇರಕರಾದ ರುದ್ರಾಂತರ್ಗತ ಬಿಂಬಮೂರ್ತಿಗೆ ನಮೋನಮಃ

ಯಜ್ಞಾಧಿಕರ್ಮಗಳಲ್ಲಿ ಮನಸ್ಸನ್ನು ಪ್ರೇರಣೆಮಾಡುವ ಚಂದ್ರ ಇಂದ್ರ ಅವರಂತರ್ಗತ ಬಿಂಬಮೂರ್ತಿಗೆ ನಮೋನಮಃ

ಹೊರಗಿನ ಸಕಲ ಪದಾರ್ಥಗಳಲ್ಲಿ ಭಗವಂತನ ವ್ಯಾಪಾರದ ಚಿಂತನೆ ಕೊಡುವ ಚಂದ್ರ ಇಂದ್ರ ರುದ್ರಾಂತರ್ಗತ ಬಿಂಬಮೂರ್ತಿಗೆ ನಮೋನಮಃ

ನನ್ನ ಶರೀರದೊಳಗಿರುವ ಇಂದ್ರಿಯಕ್ಕೆ ಗೋಚರವಲ್ಲದ ಅನೇಕ ಸೂಕ್ಷ್ಮ ವಿಷಯಗಳ ಒಳಗಿರುವ ದೇವರ ಚಿಂತನೆಕೊಡುವ ಬ್ರಹ್ಮ ವಾಯು ಶೇಷ ಶಿವ ಗರುಡರ ನಿಯಾಮಕ ಬಿಂಬಮೂರ್ತಿಗೆ ನಮೋನಮಃ

ಆ ಸೂಕ್ಷ್ಮ ವಿಷಯದಲ್ಲೂ ಜ್ಞಾನ ಭಕ್ತ್ಯಾದಿಗಳನ್ನು ಪ್ರೇರಣೆ ಮಾಡುವ ಭಾರತಿ ಸರಸ್ವತಿ ಅಂತರ್ಗತ ವಾಯು ಮತ್ತು ಬ್ರಹ್ಮದೇವರ ಬಿಂಬಮೂರ್ತಿಗೆ ನಮೋನಮಃ

ಭಗವತ್ತತ್ವದ ವ್ಯಾಖ್ಯಾನವನ್ನು ಮಾಡುವಾಗ ಮನ್ಃ ಪ್ರೇರಕರಾದ ಶೇಷಾಂತರ್ಗತ ಭಗವಂತನಿಗೆ ನಮೋನಮಃ

ಹೇಳಬೇಕಾದ ವಿಷಯವನ್ನು ಮನನ ಮಾಡಿಸುವ ರುದ್ರಾಂತರ್ಗತ ಭಗವಂತನಿಗೆ (ಬಿಂಬಮೂರ್ತಿಗೆ) ನಮೋನಮಃ

ಸತತ ದೇವರ ಧ್ಯಾನ ದಯಪಾಲಿಸುವ ಗರುಡಾಂತರ್ಗತ ಶ್ರೀಹರಿಗೆ ನಮೋನಮಃ
ಪಂಚರಾತ್ರಾದಿ ಶಾಸ್ತ್ರದ ಶ್ರವಣ ಮಡುವ ಮನಸ್ಸನ್ನು ಕೊಡುವ ಶೇಷಾಂತರ್ಗತ ಬಿಂಬಮೂರ್ತಿಗೆ ನಮೋನಮಃ
ನನ್ನ ಮನಸ್ಸನ್ನೇ ಆಯತನ (ಆಲಯ)ವಾಗಿಟ್ಟುಕೊಂಡು ರಮಾದೇವಿಯನ್ನೇ ಪ್ರತಿಮೆಯಾಗಿಟ್ಟುಕೊಂಡು ಆನಂದವನ್ನು ಕೊಡುವವನಾದ್ದರಿಂದ "ಆನಂದ"ನೆಂಬ ರಹಸ್ಯನಾಮವನ್ನು ಹೊತ್ತಿರುವ ನನ್ನ ಬಿಂಬಮೂರ್ತಿಗೆ ನಮೋನಮಃ
ಇದೇ ರೀತಿಯಲ್ಲಿ ಎಲ್ಲಾ ಇಂದ್ರಿಯಗಳಲ್ಲೂ ಚಿಂತಿಸಬೇಕು

॥ಶ್ರೀಕೃಷ್ಣಾರ್ಪಣಮಸ್ತು॥

## 10. ತತ್ವಕಾರ್ಯ ಪ್ರಕರಣ

ನನ್ನ ಶರೀರದೊಳಗಿರುವ ಅವ್ಯಕ್ತ ತತ್ವದೊಳಗಿರುವ ಸತ್ವ ರಜಸ್ಸು ತಮೋ ಗುಣಗಳಿಗೆ ನಿಯಾಮಕರಾದ ವಿಶ್ವ ತೈಜಸ ಪ್ರಾಜ್ಞರಿಗೆ ನಮೋನಮಃ
ಅಲ್ಲಿ ಸತ್ವ ಗುಣದಿಂದಾಗುವ ಕಾರ್ಯಗಳಾದ ಶಮ (ದೇವರಲ್ಲೇ ಬುದ್ದಿ ಇಡುವುದು), ದಮ(ಇಂದ್ರಿಯ ನಿಗ್ರಹ),ತಿತೀಕ್ಷಾ(ಸಹನ ಶಕ್ತಿ),ತಪಸ್ಸು, ಸತ್ಯ, ದಯಾ, ನೆನಪು, ಸಂತೃಪ್ತಿ, ತ್ಯಾಗ, ಎಚ್ಚರ, ಶ್ರದ್ಧೆ, ನಾಚಿಕೆ, ಕ್ಷಮಾಗುಣ, ಧೈರ್ಯ, ಸ್ತೋತ್ರ ಮಾಡುವುದು, ಜ್ಞಾನ ಬರುವುದು,ಸುಖ, ಭಗವಂತನ ಬಗ್ಗೆ ಎಚ್ಚರ ಇವುಗಳಲ್ಲಿ ಆಯಾ ಹೆಸರಿನಿಂದ ನಿಂತಿರುವ ಹೇ! ಬಿಂಬಮೂರ್ತಿಯೇ, ಈ ಗುಣಗಳ ರೂಪದಲ್ಲಿರುವ ನಿನ್ನ ರೂಪಗಳನ್ನು ಪ್ರಕಟ ಮಾಡುವುದರ ಮೂಲಕ, ಪ್ರತಿಬಿಂಬನಾದ ನನ್ನೊಳಗೆ ಈ ಎಲ್ಲಾಗುಣಗಳನ್ನು ದಯವಿಟ್ಟು ಪ್ರಕಟಗೊಳಿಸು, ಜ್ಞಾನವನ್ನು ಕೊಡುವ ಅಥಾವಾ ಹುಟ್ಟಿಸುವ ಸ್ವಚ್ಛತ್ವ, ಸುಖಕೊಡುವ ಶಾಂತತ್ವ ಎಂಬ ಸತ್ವಗುಣದ ಸ್ವಾಭಾವಿಕ ಗುಣಗಳಲ್ಲಿರುವ ಭಗವದ್ರೂಪಗಳಿಗೆ, ನನ್ನ ಪಂಚೇಂದ್ರಿಯಗಳಿಂದ ಪದಾರ್ಥಗಳ ಹಾಗೂ ವ್ಯಕ್ತಿಗಳ ಜ್ಞಾನವನ್ನು ಹುಟ್ಟಿಸಿ ಅದರ ಮೂಲಕ ನನ್ನನ್ನು ಬಂಧನ ಮಾಡುವ ಅನಿರುದ್ಧ ರೂಪಗಳಿಗೆ ನಮೋನಮಃ
ನನ್ನನ್ನು ಬಂಧನದಿಂದ ಬಿಡುಗಡೆಮಾಡು.

2. ರಜೋಗುಣದಲ್ಲಿ ನಿಂತು ಅದರ ಕಾರ್ಯಗಳಾದ ಕಾಮ, ಇಂದ್ರಿಯನಿಗ್ರಹ, ಬಲವಾದ ಸೆಳೆತ, ಅಹಂಕಾರ, ಆಶೀರ್ವಾದ ಮಡುವುದು,ಭೇದದೃಷ್ಟಿ, ಅಲ್ಪವದ ದುಃಖ, ಕಾರ್ಯಗಳಲ್ಲಿ ಉತ್ಸಾಹ, ಯಶಸ್ಸು, ಪ್ರೀತಿ, ದಬ್ಬಾಳಿಕೆ, ಶಕ್ತಿವಂತವಾಗಿರುವುದು, ಪೂರ್ಣಬಲದಿಂದ ಇರುವುದು, ಚಾಂಚಲ್ಯ, ಸಂಪತ್ತು, ಸ್ವಪ್ನ ಇವುಗಳಲ್ಲಿ ಆಯಾ ಹೆಸರು ಇಟ್ಟುಕೊಂಡ ಭಗವಂತನ ಪ್ರದ್ಯುಮ್ನ ರೂಪಗಳಿಗೆ ನಮೋನಮಃ

ರಜೋಗುಣದ ಲಕ್ಷಣವಾದ, ಅಂಟಿನಲ್ಲಿ, ಕ್ರಿಯಾಶಕ್ತಿಯಲ್ಲಿ, ಆಯಾ ಹೆಸರು ಇಟ್ಟುಕೊಂಡು ಐದು ಕರ್ಮೇಂದ್ರಿಯಗಳ ಮೂಲಕ ಬಯಕೆಗಳನ್ನು ಹುಟ್ಟಿಸಿ, ತಕ್ಕಂಥಾಕರ್ಮಗಳನ್ನು ಮಾಡಿಸಿ ನನ್ನನ್ನು ಬಂಧನ ಮಾಡುವ ಪ್ರದ್ಯುಮ್ನಾತ್ಮಕ ಬಿಂಬಮೂರ್ತಿಗೆ ನಮೋನಮಃ..

3. ತಮೋಗುಣದಲ್ಲಿ ನಿಂತ ಅದರ ಕಾರ್ಯಗಳಾದ ಕ್ರೋಧ, ಲೋಭ, ಸುಳ್ಳು, ಹಿಂಸೆ, ಕಪಟತನ, ಅಹಂಕಾರ, ಅಸಹನತೆ,ಜಗಳ,ಶೋಕ,ಮೋಹ(ತಪ್ಪು ಎಂದು ತಿಳಿದಿದ್ದರು ಬಿಡಲಾರದ ಪರಿಸ್ಥಿತಿ) ವಿಷಾದ,ಆರ್ತಿ(ತುಂಬಾ ಒದ್ದಾಟ) ನಿದ್ದೆ, ಕೆಲಸಮಾಡಲಿಕ್ಕೆ ಮನಸ್ಸು ಬಾರದಿರುವುದು,ಸೋಮಾರಿತನ, ಸುಷುಪ್ತಿ ಮೊದಲಾದ ಕಾರ್ಯಗಳಲ್ಲಿ ಆಯಾ ಹೆಸರಿನಿಂದ ತಾನೇ ನಿಂತು ಅಜ್ಞಾನ, ಮಿಥ್ಯಾಜ್ಞಾನ ಹುಟ್ಟಿಸಿ ಪ್ರಧಾನವಾಗಿ ಮರವು, ಸೋಮಾರಿತನವನ್ನು,ನಿದ್ರೆಯನ್ನೂ ಕೊಟ್ಟು ಅದರ ಮೂಲಕ ನನ್ನನ್ನು ಕಟ್ಟಿ ಹಾಕುವ ಸಂಕರ್ಷಣ ರೂಪಿಯಾದ ಬಿಂಬಮೂರ್ತಿಗೆ ನಮೋನಮಃ

ನನ್ನಲ್ಲಿ ನಡೆಯುವ ಮೂರುಗುಣದ ಮಿಶ್ರಿತ ಕಾರ್ಯಗಳಾದ ಧರ್ಮಾರ್ಥಗಳಲ್ಲಿ ನಿಷ್ಠೆ, ಶ್ರದ್ದೆ, ಸ್ವಧರ್ಮಾಚರಣೆ ಮೊದಲಾದ ಕಾರ್ಯಗಳಲ್ಲಿ ನಿಂತಿರುವ ಅನಿರುದ್ಧ, ಪ್ರದ್ಯುಮ್ನ,ಸಂಕರ್ಷಣರೂಪಿಯಾದ ಬಿಂಬನಿಗೆ ನಮೋನಮಃ

ಸತ್ವಗುಣದ ಸೂಕ್ಷ್ಮಭಾಗದಲ್ಲಿ ನಿಂತ ದೇವರ ಜ್ಞಾನ ಭಕ್ತ್ಯಾದಿಗಳನ್ನು ಕೊಡುವ ವಿಶ್ವಮೂರ್ತಿಗೆ ನಮೋನಮಃ

ಸತ್ವಗುಣದ ಸ್ಥೂಲಭಾಗದಲ್ಲಿದ್ದು ಜಗತ್ತಿನ ಬಗ್ಗೆ ಸರಿಯಾದ ತಿಳುವಳಿಕೆಕೊಟ್ಟು ತದ್ವಾರ ಬಂಧಕನೂ, ಮೋಚಕನೂ ಆದ ವಿಶ್ವಮೂರ್ತಿಗೆ ನಮೋನಮಃ

ನಂತರ ರಜೋಗುಣದ ಸೂಕ್ಷ್ಮಭಾಗದಲ್ಲಿದ್ದು ಭಗವತ್ಪೂಜಾತ್ಮಕ ಕರ್ಮಗಳನ್ನು ಮಾಡಿಸುವ ತೈಜಸಮೂರ್ತಿಗೆ ನಮೋನಮಃ

ರಜೋಗುಣದ ಸ್ಥೂಲಭಾಗದಲ್ಲಿದ್ದು ಲೌಕೀಕವಾದ ಸಕಲ ಕರ್ಮಗಳನ್ನು ಮಡಿಸುವ ತೈಜಸ ಮೂರ್ತಿಗೆ ನಮೋನಮಃ

ತಮೋಗುಣದ ಸೂಕ್ಷ್ಮಭಾಗದಲ್ಲಿದ್ದು ಅಜ್ಞಾನ, ಮಿಥ್ಯಾಜ್ಞಾನ(ದೇವರಬಗ್ಗೆ) ಕೊಡುವ ಪ್ರಾಜ್ಞಮೂರ್ತಿಗೆ ನಮೋನಮಃ

ತಮೋಗುಣದ ಸ್ಥೂಲಭಾಗದಲ್ಲಿದ್ದು ಈ ಜಗತ್ತಿನ ಬಗ್ಗೆ ಅಜ್ಞಾನ ಮಿಥ್ಯಾಜ್ಞಾನ ಕೊಡುವ ಪ್ರಾಜ್ಞಮೂರ್ತಿಗೆ ನಮೋನಮಃ.

ಹೇ ಬಿಂಬಮೂರ್ತಿಯೇ! ನನ್ನ ಕರ್ಮಾನುಸಾರ ನೀನು ಇಚ್ಛೆಕೊಟ್ಟು ನನಗೆ ಯಾವು ಯಾವುದನ್ನು ಕೊಡುತ್ತಿಯೋ ಆಯಾ ಅವಸ್ಥೆಗಳಲ್ಲಿ ಎಲ್ಲಾನಿನ್ನ ರೂಪಗಳ ನೆನಪುಕೊಡು. ನಿನ್ನ ಅಧೀನವಾಗಿ ದೇವ ದೈತ್ಯರ ಮೂಲಕ ಪುಣ್ಯಪಾಪ ಕರ್ಮಗಳನ್ನು ಮಾಡುತ್ತಾ ಸದಾ ನಿನ್ನ ವಶವಾಗಿದ್ದೇನೆಂಬ ಭಾವನೆಯನ್ನು ನನಗೆ ಸದಾ ಕೊಡು.

ಮಹತ್ತತ್ವದಲ್ಲಿದ್ದುಕೊಂಡು, ಸತ್ವಾಂಶಗಳು ಜಾಸ್ತಿ ಇರುವುದರಿಂದ, ಜ್ಞಾನ ಪ್ರಧಾನವಾದ ಚಿತ್ತದಲ್ಲಿ ತಾನೇ ನೆಲೆಸಿದ್ದು ಸ್ವಚ್ಛತ್ವ, ವಿಕರವಿಲ್ಲದಿರುವಿಕೆ, ಪ್ರಶಾಂತವಾಗಿರುವುದು ಮೊದಲಾದ ಗುಣಗಳಿಂದ, ತನ್ನ ಸ್ಥಿರವಾದ ನೆನಪನ್ನು ಕೊಡುವ ವಾಸುದೇವ ಮೂರ್ತಿಗೆ ನಮೋನಮಃ

ರಜೋ ಅಂಶಗಳು ಹೆಚ್ಚಾಗಿರುವುದರಿಂದ ಕ್ರಿಯಾ ಪ್ರಧಾನವಾದ ವೈಕರಿಕ, ತೈಜಸ, ತಾಮಸ ಬೇಧದಿಂದ ಮೂರು ರೀತಿಯಲ್ಲಿ ಅಹಂಕಾರ ತತ್ವದಲ್ಲಿ ನಿಂತು ಅಹಂಕಾರ ಮಮಕಾರಗಳನ್ನು ಉತ್ಪಾದನೆ ಮಾಡುತ್ತಾ ನನ್ನನ್ನು ಕಟ್ಟಿಹಾಕುವ ಸಂಕರ್ಷಣಮೂರ್ತಿಗೆ ನಮೋನಮಃ, ಈ ಬಂಧನದಿಂದ ಬಿಡುಗಡೆ ಮಾಡು.

ಬುದ್ಧಿತತ್ವದಲ್ಲಿದ್ದುಕೊಂಡು ನಿಶ್ಚಯಜ್ಞಾನವನ್ನು ಕೊಡತಕ್ಕಂಥ ಪ್ರದ್ಯುಮ್ನರೂಪಗಳಿಗೆ ನಮೋನಮಃ

ಪಂಚಜ್ಞಾನೇಂದ್ರಿಯಗಳಿಗೆ ಪ್ರೇರಕರಾದ ನಿಯಾಮಕರಾದ ದೇವತೆಗಳಿಗೆ ನಿಯಾಮಕಳಾಗಿ ನಿಂತಿರುವ ಉಮಾದೇವಿ ಅಂತರ್ಗತ ಸಂಕರ್ಷಣಮೂರ್ತಿಗೆ ನಮೋನಮಃ

ಪಂಚಕರ್ಮೇಂದ್ರಿಯಗಳ ಪ್ರೇರಕರಾದ ಆಯಾ ನಿಯಾಮಕರಾದ ಅಹಂಕಾರಿಕ ಪ್ರಾಣದೇವರಲ್ಲಿ ನಿಂತಿರುವ ಸಂಕರ್ಷಣಮೂರ್ತಿಗೆ ನಮೋನಮಃ

ಐದು ಜ್ಞಾನೇಂದ್ರಿಯಗಳಿಂದ, ಐದು ಕರ್ಮೇಂದ್ರಿಯಗಳಿಂದ ಆಗುವ ಸಕಲ ಕರ್ಮಗಳಲ್ಲಿ ಸದಾ ಭಗವಂತನ ನೆನಪು, ಆಯಾ ದೇವತೆಗಳಂತರ್ಗತ ಭಗವಂತ, ನನಗೆ ದಯಪಾಲಿಸಲಿ. ನನ್ನ ಶರೀರದೊಳಗಿರುವ ಐದು ಭೂತಗಳಲ್ಲಿ ಐದು ತನ್ಮಾತ್ರಗಳಲ್ಲಿ ನಿಂತಿದ್ದು, ಆಯಾ ಗುಣಗಳನ್ನು ಪ್ರಕಟಮಾಡುತ್ತಾ ಅದರ ಮೂಲಕ ಸಂಸಾರದ ಬಂಧನ ಮಾಡುವ ಭಗವದ್ರೂಪಕ್ಕೆ ನಮೋನಮಃ

॥ಶ್ರೀಕೃಷ್ಣಾರ್ಪಣಮಸ್ತು॥

## 11. ರಥಾದಿ ಪ್ರಕರಣ

ಈ ದೇಹವನ್ನು ಅಷ್ಟೇ ಅಲ್ಲದೆ ಬ್ರಹ್ಮಾಂಡದೊಳಗಿರುವ ಸಕಲ ಸಚ್ಚೇತನರ ದೇಹಗಳನ್ನು ರಥವೆಂದು ಚಿಂತಿಸಿ ಆಯಾ ಜೀವರಾಶಿಗಳ ತಿರುಗಾಟವೆಲ್ಲ ಭಗವಂತನಿಗೆ ರಥೋತ್ಸವವೆಂದು ಅರ್ಪಿಸಬೇಕು, ಹಾಗೆಯೇ ಬ್ರಹ್ಮಾದಿ ಸಕಲ ಸಚ್ಚೇತನರ ಶರೀರವು, ನನ್ನ ದೇಹವೂ ದೇವರಿಗೆ ವೀಣೆಯೆಂದು, ನುಡಿಯುವ ಸಕಲ ಶಬ್ದಗಳು ದೇವರಿಗೆ ಗಾನವೆಂದು ಅರ್ಪಿಸಬೇಕು.

॥ ಶ್ರೀ ಕೃಷ್ಣಾರ್ಪಣಮಸ್ತು ॥

## 12. ಜಾಗೃತ್ ಪ್ರಕರಣ

ಎಚ್ಚರ ಕಾಲದಲ್ಲಿ ಭಗವಂಥ ನಮ್ಮಲ್ಲಿ ಇಚ್ಛೆ ಹುಟ್ಟಿಸಿ, ಆ ಇಚ್ಛೆಗೆ ತಕ್ಕಂತೆ ಎಲ್ಲಾ ಪಧಾರ್ಥಗಳನ್ನು ನಮ್ಮಿಂದಲೆ ಮಾಡಿಸಿ ನಮಗೆ ತೊರುತ್ತಾನೆ. ಹಾಗೆಯೇ ಧ್ಯಾನ ಮಾಡುವಾಗಲೂ, ಹಗಲುಗನಸಿನಲ್ಲಿಯೂ ನಮಗೆ ಇಚ್ಛೆ ಹುಟ್ಟಿಸಿ ನಮ್ಮ ಪ್ರಯತ್ನದಲ್ಲಿ ತನ್ನ ಪ್ರಯತ್ನವಿಟ್ಟು ಪ್ರಯತ್ನ ಮಾಡಿಸಿ ಅನೇಕ ಜನ್ಮಾಂತರ ಸಂಸ್ಕಾರಗಳನ್ನೇ ಉಪಾದಾನವನ್ನಾಗಿ ಇಟ್ಟುಕೊಂಡು ಎಲ್ಲಾ ಪಧಾರ್ಥಗಳನ್ನು ಸೃಷ್ಠಿಸಿ

ನಮ್ಮನ್ನು ಸಂತೋಷ ಪಡಿಸುತ್ತಾನೆ. ಎಚ್ಚರ ಕಾಲದಲ್ಲಿ, ಹಗಲುಗನಸಿನಲ್ಲಿ ದೇವರು ದೇವತೆಗಳು ಪ್ರಕಟಮಾಡಿದ ಅನಂತರೂಪಗಳನ್ನು ದೇವತೆಗಳಂತರ್ಯಾಮಿ ದೇವರಿಗೆ ಸಮರ್ಪಿಸುವುದೇ ಜಾಗೃತ್ ಪ್ರಕರಣದ ತಾತ್ಪರ್ಯ.

॥ ಶ್ರಿ ಕೃಷ್ಣಾರ್ಪಣಮಸ್ತು ॥

## ಸ್ವಪ್ನ ಪ್ರಕರಣ

ವಿಶ್ವನಾಮಕ ಭಗವಂತನು ಕಂಠದಲ್ಲಿ ತೈಜಸನಿಂದ ಕೂಡಿ ತೋರುವ ವ್ಯಾಪರವೇ ಸ್ವಪ್ನ. ಸಂಸ್ಕಾರಗಳನ್ನು ಉಪಯೋಗಿಸಿ ದೇವರು ಸೃಷ್ಟಿಮಾಡಿದ ಪದಾರ್ಥಗಳನ್ನು, ಅಲ್ಲಿ ದೇವರು ಮಾಡಿಸಿದ ವ್ಯಾಪರಗಳನ್ನು, ಅಲ್ಲಿ ಪ್ರಕಟವಾದ ಭಗವದ್ರೂಪಗಳನ್ನು ಎದ್ದಮೇಲೆ ದೇವರಿಗೆ ಅರ್ಪಿಸಿದರೆ ಅದು ದೊಡ್ಡ ಯಜ್ಞ.

॥ ಶ್ರೀ ಕೃಷ್ಣಾರ್ಪಣಮಸ್ತು ॥

## ಸುಷುಪ್ತಿ ಪ್ರಕರಣ

ತೈಜಸನಿಂದ ಕೂಡಿದ ವಿಶ್ವನಾಮಕ ಪ್ರಾಜ್ಞನನ್ನು ಕೂಡಿ ಜೀವನನ್ನು ಆಲಿಂಗಿಸಿಕೊಂಡು ಕೊಟ್ಟ ಸುಖವನ್ನು , ಅಲ್ಲಿ ಪ್ರಕಟವಾದ ಭಗವದ್ರೂಪಗಳನ್ನು ಎದ್ದ ಮೇಲೆ ಭಗವಂತನಿಗೆ ಅರ್ಪಿಸುವುದೇ ದೊಡ್ಡ ಯಜ್ಞ.

॥ ಶ್ರೀ ಕೃಷ್ಣಾರ್ಪಣಮಸ್ತು ॥

## 15. ಗಮನಾಗಮನ ಪ್ರಕರಣ

ಭವಂತ ಜೀವನನ್ನು ಅವನ ಕರ್ಮಾನುಸಾರ ಜೀವಿಸುವಂತೇ ಮಾಡಿ, ಮರಣಕಾಲದಲ್ಲಿ ಸೂಚನೆಗಳನ್ನು ಕೊಟ್ಟು (ಸಜ್ಜೀವರುಗಳಿಗೆ), ಕೊನೆಯ ಕಾಲದಲ್ಲಿ ಲಯಚಿಂತನೆ ಮಾಡಿಸಿ ಪ್ರಾಣೋತ್ಕ್ರಮಣದ ಮೂಲಕ ಸ್ವರ್ಗಾದಿಲೋಕಕ್ಕೆ ಕರೆದುಕೊಂಡು ಹೋಗಿ ಅವನ ಪುಣ್ಯಕ್ಕನುಗುಣವಾಗಿ ವಾಸ ಮಾಡಿಸುತ್ತಾನೆ. ಅನಂತರದಲ್ಲಿ ಪುಣ್ಯ ಮುಗಿದಮೇಲೆ ಸ್ವರ್ಗ, ಮೇಘ, ಭೂಮಿ, ತಂದೆ, ತಾಯಿ

ಎಂಬ ಐದು ಅಗ್ನಿಗಳ ಮೂಲಕ ದೇವತೆಗಳ ದ್ವಾರ ಜೀವನನ್ನು ಹೋಮ ಮಾಡಿಸಿ ಹೊಸ ಶರೀರವನ್ನು ದಯಪಾಲಿಸುತ್ತಾನೆ. ನಮ್ಮನ್ನು ಸ್ವರ್ಗಾದಿ ಲೋಕಕ್ಕೆ ಕರೆದುಕೊಂಡು ಹೋಗುವಾಗಲೂ, ಅನಂತರದಲ್ಲಿ ನೂತನ ಶರೀರ ಕೊಡಲಿಕ್ಕೆ ಐದು ಅಗ್ನಿಗಳ ಮೂಲಕ ಕರೆದುಕೊಂಡು ಬಂದಾಗಲೂ ದೇವರು ಪ್ರಕಟಮಾಡಿದ ಅನಂತ ರೂಪಗಳನ್ನು ದೇವರಿಗೆ ಯಜ್ಞತ್ವೇನ ಅರ್ಪಿಸುವುದೇ ಮಹಾಪೂಜೆ ಎನಿಸಿಕೊಳ್ಳುತ್ತದೆ.

॥ ಶ್ರೀ ಕೃಷ್ಣಾರ್ಪಣಮಸ್ತು ॥

## 16. ಮೊಕ್ಷ ಪ್ರಕರಣ

ಜೀವರಿಗೆ ನಿತ್ಯಾನಂದವನ್ನು ಕೊಡಲಿಕ್ಕಾಗಿ ಭಗವಂತನು ಸಜ್ಜನರ ಸಂಗವನ್ನು ತೋರುತ್ತಾನೆ. ಆ ಸಾಧನೆಗಳನ್ನು ಆಚರಿಸಿದ ಜೀವ ಪುಷ್ಕರಾದಿ ದೇವತೆಗಳ ಅಪರೋಕ್ಷದ ಮೂಲಕ ಭಗವಂತನವರೆಗೂ ಅಪರೋಕ್ಷ ಪಡೆದು ಸಂಚಿತವನ್ನು ಕಳೆದುಕೊಂಡು, ಆಗಾಮಿ ಕರ್ಮ ಅಂಟದೆ, ದೇವರ ಅನುಗ್ರಹದಿಂದ ಪ್ರಾರಬ್ಧ ಕರ್ಮವನ್ನು ನಿಶ್ಶೇಷವಾಗಿ ಅನುಭವಿಸಿ, ಕರ್ಮಕ್ಷಯವೆಂಬ ಮುಕ್ತಿಯ ಮೊದಲ ಭಾಗ ಪಡೆಯುತ್ತಾನೆ.

ಅನಂತರ ಶರೀರದಿಂದ ಹೊರಗೆ ಬಂದು ಉತ್ಕ್ರಾಂತಿ ಎಂಬ ಮೋಕ್ಷವನ್ನು ಅನೇಕ ಲೋಕಗಳ ಮೂಲಕ ಹೋಗುತ್ತಾ, ವಾಯುದೇವರ ಲೋಕವನ್ನು ಹೊಂದಿ ಮಾರ್ಗವೆಂಬ ಮೋಕ್ಷವನ್ನು ಪಡೆಯುತ್ತಾನೆ. ಅನಂತರದಲ್ಲಿ ಬ್ರಹ್ಮದೇವರ ಮೂಲಕ ಗರುಡ ಶೇಷ ಮಾರ್ಗದಿಂದ ಲಯಹೊಂದಿದ ಸಕಲ ದೇವತೆಗಳೊಡಗೂಡಿ ಪ್ರಳಯಕಾಲದಲ್ಲಿ ಲಿಂಗಶರೀರ ಭಂಗವಾದ ಮೇಲೆ ದೇವರ ಉದರದಲ್ಲೇ ಮಲಗಿರುತ್ತಾನೆ. ಅನಂತರದಲ್ಲಿ ಸೃಷ್ಟಿಕಾಲ ಬಂದಾಗ ಲಿಂಗ ಶರೀರ ಭಿನ್ನವಾದ ಸಕಲ ಜೀವರನ್ನು ಭಗವಂತ ವೈಕುಂಠಾದಿ ಲೋಕಗಳಲ್ಲಿಟ್ಟು ಎಡಬಿಡದ ಸುಖ ಕೊಟ್ಟು ಮತ್ತೂ ಸಂಸಾರಕ್ಕೆ ತಿರುಗಿಬಾರದಂತೆ ಅನುಗ್ರಹಿಸುತ್ತಾನೆಂದು ಜೀವರಿಗೆ ಅತ್ಯಂತ ಮಂಗಳಕರವಾಗಿದೆ ಈ ಶೋಡಶೀ ಗ್ರಂಥದ ಪ್ರಮೇಯವು.

॥ಶ್ರೀಕೃಷ್ಣಾರ್ಪಣಮಸ್ತು॥